

ಜಾಗೀರಹಳ್ಳಿ
ನಾಟಕ
ಸಿ.ಪಿ.ನಾಗರಾಜ

‘ಕೆರೆಗೆ ಹಾರ' ಜನಪದ ಕಾವ್ಯದ ಕಥಾವಸ್ತುವನ್ನು ಆಧಾರವಾಗಿಟ್ಟುಕೊಂಡು
‘ಭಾಗೀರಥಿ' ಎಂಬ ಈ ನಾಟಕವನ್ನು ರಚಿಸಿದ್ದೇನೆ.

ಭಾಗೀರಥಿ ನಾಟಕದ ಬಗ್ಗೆ ಅಭಿಪ್ರಾಯಗಳು

`ಕೆರೆಗೆ ಹಾರ' ಎಂಬ ಜನಪದ ಕಾವ್ಯವನ್ನು ಬಹು ಸುಂದರವಾಗಿ ನಾಟಕಕ್ಕೆ ಪರಿವರ್ತಿಸಿದ್ದೀರಿ. -**ತ.ಸು.ಶಾಮರಾಯ**

ನಾಟಕಕಾರರಿಗೆ ಇರುವ ಗ್ರಾಮಜೀವನದ ವಾಸ್ತವ್ಯದ ಅರಿವು, ಅದಕ್ಕನುಗುಣವಾದ ಗ್ರಾಮ್ಯ ಭಾಷೆಯ ಸಮರ್ಥವಾದ ಬಳಕೆ ಈ ನಾಟಕದ ಶಕ್ತಿಯನ್ನು ಹೆಚ್ಚಿಸಿದೆ.

-ಪುಸ್ತಕ ಲೋಕ

ಭಾವತಪ್ತವಾಗಬಹುದಾದಂಥ ಸನ್ನಿವೇಶಗಳುಳ್ಳ ಈ ಪುಟ್ಟ ನಾಟಕದಲ್ಲಿ ನಾಟಕಕಾರರು ಸೆಂಟಿಮೆಂಟಲ್ ಆಗಿಲ್ಲ. ಭಾವಪೂರ್ಣ ವಾತಾವರಣ ಸೃಷ್ಟಿಸುವಲ್ಲಿ ಗ್ರಾಮ್ಯ ಭಾಷೆಯನ್ನು ಲೇಖಕರು ಸಮರ್ಥವಾಗಿ ಹದವರಿತು ಪ್ರಯೋಗಿಸಿದ್ದಾರೆ.

-ಸಂಕ್ರಮಣ

ಭಾಗೀರಥಿ

(ರಚನೆ : 1976)

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ

75, ‘ಎ’ ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್,

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com

ಪಾತ್ರವರ್ಗ

ಮಲ್ಲನಗೌಡ---ಕಲ್ಲನಕೇರಿಯ ಗೌಡ

ಮಾದೇಗೌಡ/ಮಾದೇವ/ಮಾದೇವರಾಯ---ಮಲ್ಲನಗೌಡನ ಕಿರಿಯ ಮಗ

ಶ್ರೀನಿವಾಸ ಜೋಯಿಸ

ದೇವಯ್ಯ---ಮಾದೇವರಾಯನ ಗೆಳೆಯ

ಬೋರ, ಕೆಂಚ, ತಿಮ್ಮ, ಕರಿಯ---ಕಲ್ಲನಕೇರಿಯ ನಿವಾಸಿಗಳು

ಸಿದ್ದ---ಮಲ್ಲನಗೌಡನ ಮನೆಯ ಆಳು

ಮಾದಿ---ಮಲ್ಲನಗೌಡನ ಮನೆಯ ಆಳು

ರಾಮೇಗೌಡ---ಭಾಗೀರಥಿಯ ತಂದೆ

ತಿಮ್ಮವ್ವ---ಭಾಗೀರಥಿಯ ತಾಯಿ

ಲಕ್ಷ್ಮಮ್ಮ---ಭಾಗೀರಥಿಯ ಅತ್ತೆ

ದೊಡ್ಡೋಳು---ಭಾಗೀರಥಿಯ ಅಕ್ಕ

ಮಲ್ಲವ್ವ---ಭಾಗೀರಥಿಯ ಓರಗಿತ್ತಿ

ಗೌರವ್ವ---ಭಾಗೀರಥಿಯ ಓರಗಿತ್ತಿ

ಪಾರ್ವತಿ---ಭಾಗೀರಥಿಯ ಗೆಳತಿ

ಭಾಗೀರಥಿ---ಮಲ್ಲನಗೌಡನ ಕಿರಿಯ ಸೊಸೆ

ಭಾಗೀರಥಿ

ಅಂಕ - ಒಂದು

ದೃಶ್ಯ – 1

[ಕಲ್ಲನಕೇರಿಯ ಮನೆಯೊಂದರ ಪಡಸಾಲೆಯಲ್ಲಿ ಕುಳಿತು ಬೋರ ಮತ್ತು ಕೆಂಚ ಹರಟುತ್ತಿದ್ದಾರೆ.]

ಬೋರ : ನೋಡಿದೆಯಾ ಕೆಂಚ, ಹೆಂಗಾಯ್ತು ಅಂತ.

ಕೆಂಚ : ಅಯ್ಯೋ ಬುಡಣ್ಣಾ, ಒಳಗೊಂದು ಹೊರಗೊಂದು ಇಟ್ಕೊಂಡು ಮಾಡುದ್ರೆ, ಆಗೋದೆಲ್ಲ ಹಿಂಗೇನೆ.

ಬೋರ : ಅಂತೂ ಮೊಕಕ್ಕೆ ಮಸಿ ಬಳಿಸಿಕೊಂಡಂಗಾಯ್ತು. ಊರಲ್ಲೆಲ್ಲಾ ಇದೇ ಸುದ್ದಿಯಂತೆ.

ಕೆಂಚ : ಇನ್ನೇನ್ ಮಂತೆ. ನಮ್ಮ ಅಪ್ಪದೀರ್ ಕಾಲದಿಂದ್ಲೂ ಈ ಊರ್ನಲಿ ನೀರಿನ ಆಸ್ರೆ ಇಲ್ಲ. ಎತ್ತಾಗೆ ನೋಡುದ್ರೂ ಕಲ್ ಬಂಡೇನೆ ಕಾಣ್ತವೆ. ಅಂತಾದ್ದರಲ್ಲಿ ಇವ ಏನೋ ತನ್ನ ಹೆಸರ ಶಾಶ್ವತ ಮಾಡ್ಕೊಬೇಕು ಅಂತ ಬಾವಿ ತೆಗ್ಸೋಕೆ ಕೈ ಹಾಕ್ದ.

ಬೋರ : ಹಿಂದಿನೋರೆಲ್ಲಾ ಏನು ಮಂಕ್ರೆ.... ಮುಟ್ಠಾಳರೇ.... ಅವರೆಲ್ಲಾ ಬಾವಿ ತೋಡಿಸ್ದೆ ಇದ್ದಿರಬೇಕಾದ್ರೆ ಏನೋ ಐನಾತಿ ಕಾರಣವೇ ಇರ್ಬೇಕು. ನಮ್ಮೂರ ಹೆಂಗಸ್ರೆಲ್ಲಾ ಒಂದು ಮೈಲಿ ದೂರದಲ್ಲಿ ಇರುವ ಹರಿಯೂ ಹಳ್ಳದಲ್ಲಿ ನೀರ್ ಮೊಗೆಯೂದ ನೋಡ್ತಾ, ಸುಮ್ನೆ ಕೈಕಟ್ಟಿ ಕುಳಿತಿರ್ತಿದ್ರಾ?

ಕೆಂಚ : ನಿಜ ಕಣಣ್ಣಾ. ಊರ ಮಂದಿಯೆಲ್ಲಾ ನೀರ್ಗೆ ಇಷ್ಟೊಂದು ತಾಪತ್ರಯ ಪಡೋದ್ನ ನೋಡ್ಕೊಂಡು ನೂರಾರ್ ವರ್ಷದಿಂದ ಯಾರೂ ಏನೂ ತೋಡಿಸ್ದೆ ಕಟ್ಟಿಸ್ದೆ ಇರಬೇಕಾದ್ರೆ ಏನೋ ದೊಡ್ಡ ತಡಂಗ್ಲೆ ಇರ್ಬೇಕು.

ಬೋರ : ಅದನ್ನ ತಿಳೀದೆ, ಇವನು ನೋಡು. ಊರ್ಗೆ ದೊಡ್ಡಗೌಡ ಅನ್ನಿಸಿಕೊಂಡಿರೋನು, ಏನೋ ಗನ ಕಾರ್ಯ ಮಾಡ್ತೀನಿ ಅಂತ ಹೊಂಟವ್ನೆ. ನೆಲ ತೋಡಿಸ್ಬುಟ್ರೆ ನೀರು ಬಂದುಬುಟ್ಟದೇ?

ಕೆಂಚ : ನಿಜ ಕಣಣ್ಣಾ, ಗಂಗಮ್ಮ - ಸುಮ್ನೆ ಬತ್ತಳಾ.... ನಾವ್ ನಾವ್ ಮಾಡಿರೋ ಪಾಪ ಪುಣ್ಯ ನೋಡ್ಕೊಂಡು ಉಕ್ಕಿ ಹರೀತಾಳೆ ಆ ನನ್ನ ತಾಯಿ.

ಬೋರ : ಊರ್ಗೇನು ಕೇಡ್ಗಾಲ ಬತ್ತದೊ. ಹಿಂದಿನಿಂದ ನಡೀದೆ ಇದ್ದ ಕಾರ್ಯ ಮಾಡ್ಸೋಕೆ ಹೊಂಟವ್ನೆ. ಅದ್ಕೆ ನೋಡು ಹತ್ತಾಳುದ್ದ ತೋಡಿಸಿದ್ರೂ, ಒಂದು ಮೊಗೆಯಷ್ಟೂ ನೀರಿಲ್ಲ.

ಕೆಂಚ : ಅಯ್ಯೋ ಬುಡಣ್ಣಾ. ಮಾಡ್ದೋರ ಪಾಪ ಆಡ್ದೋರ ಬಾಯಲ್ಲಿ ಅಂದಂಗೆ ನಮಗ್ಯಾಕೆ ದೊಡ್ಡೋರ ಮಾತು. ಅವರವ್ರ ಹಣೇಲಿ ಬರ್ದಿದ್ದಂಗಾಯ್ತದೆ.

ಬೋರ : ಅದನ್ನೇ ಕಣೋ ನಾನು ಹೇಳಿದ್ದು. ಊರಲ್ಲಿ ಮಾಡಬಾರದ್ದು ಮಾಡುದ್ರೆ.... ಆಗಬಾರದ್ದು ಆಯ್ತದೆ. ನೀ ಏನಾರು ಅನ್ನು, ನಂಗಂತೂ ಕಲ್ಲನಕೇರೀಲಿ ನೀರ್ ಬರೋದು ಒಂದೆ; ಪಟ್ಟಣದ ರಂಗಯ್ಯ ಎದ್ದು ಕುಂತ್ಕೋದು ಒಂದೆ.

ಕೆಂಚ : ನೋಡಣ್ಣ.... ಅದೇನು ಅಷ್ಟೊಂದು ಜನ ಮಾರಿಗುಡಿ ತಾವು ಸೇರಯ್ತಲ್ಲ. ಬಾಣ್ಣ, ಹೋಗಿ ನೋಡ್ಕಾ.

(ಇಬ್ಬರೂ ಅತ್ತ ತೆರಳುತ್ತಾರೆ.)

ದೃಶ್ಯ - 2

[ಮಲ್ಲನಗೌಡರ ಮನೆಯಲ್ಲಿನ ಒಂದು ಕೊಠಡಿ. ಮಲ್ಲನಗೌಡರು ಮತ್ತು ಶ್ರೀನಿವಾಸ ಜೋಯಿಸರು ಮಾತುಕತೆಯಲ್ಲಿ ತೊಡಗಿದ್ದಾರೆ.]

ಜೋಯಿಸ : ಈ ರೀತಿ ತಲೆ ಮೇಲೆ ಕೈ ಹೊತ್ತು ಕುಳಿತರೆ ಕಾರ್ಯವಾಗುತ್ತದೆಯೆ? ದೇವರ ಮೇಲೆ ಭಾರ ಹಾಕಿ ಬಂದಿದ್ದನ್ನ ಅನುಭವಿಸಲೇಬೇಕು.

ಗೌಡ : ನಿಜ ಅಯ್ನೋರೆ. ನೀವು ಹೇಳ್ದಂಗೆ ಈ ಜೀವ ಇರೋದೆ ಅದ್ಕೆ. ಭಗವಂತನ ಇಚ್ಛೆ ಇದ್ದಂಗಾಗ್ಲಿ. ಆದ್ರೆ ಊರೆಲ್ಲಾ ಆಡ್ಕೊಂಡು ನಗುವಂಗಾಯ್ತಲ್ಲ ನಮ್ಮ ಬಾಳು.

ಜೋಯಿಸ : ಲೋಕದ ಆಟವೇ ಈ ರೀತಿ ಗೌಡ. ಪ್ರಪಂಚದಲ್ಲಿ ಒಳ್ಳೇದನ್ನ ಮಾಡುದ್ರೂ ಕಷ್ಟ.... ಕೆಟ್ಟದ್ದನ್ನ ಮಾಡುದ್ರೂ ಕಷ್ಟ. ಲೋಕದ ಡೊಂಕನ್ನು ತಿದ್ದೂದಕ್ಕೆ ಯಾರ ಕೈಯಲ್ಲೂ ಸಾಧ್ಯವಿಲ್ಲ. ನೀನು ಜನರ ಕೆಟ್ಟ ಮಾತಿಗೆ ಕಿವಿಗೊಟ್ಟು ನರಳಬೇಡ.

ಗೌಡ : ಹೆಂಗೆ ಸ್ವಾಮಿ ಸುಮ್ನಿರೋದು. ಸಣ್ಣ ಮಕ್ಕಳ ಬಾಯಿಂದ ಹಿಡಿದು ಸಾಯೋ ಮುದುಕನ ತನಕ ಈ ಬಾವಿ ಕತೆ ಹಬ್ಬೈತೆ. ಇವತ್ತು ಬತ್ತದೆ, ನಾಳೆ ಬತ್ತದೇ ಅಂತ ನಾನು ತೋಡ್ಸಿ ತೋಡ್ಸೀ ಸುಸ್ತಾದೆ. ಹತ್ತಾಳುದ್ದ ಹೋದ್ರೂ.... ನೋಡಿ ನೋಡೀ ನಮ್ಮ ಕಣ್ಣು ಪೋಟು ಬೀಳ್ತೆ ಹೊರ್ತು ಗಂಗವ್ವ ಮಾತ್ರ ಕಾಣ್ಲಿಲ್ಲ.

ಜೋಯಿಸ : ಧೈರ್ಯ ಕಳ್ಕೋಬೇಡ. ಒಳ್ಳೇ ಮನಸ್ಸಿನಿಂದ ನೀನು ಈ ಕಾರ್ಯಕ್ಕೆ ಕೈಹಾಕಿದ್ದೀಯೆ. ನೀರಿಲ್ಲದ ಊರಿನಲ್ಲಿ ನೀರು ತಂದು ಪುಣ್ಯ ಪಡೆಯೂ ಕೆಲ್ಸ ಎಲ್ಲರ ಕೈನಿಂದಲೂ ಆಗೊಲ್ಲ. ದೊಡ್ಡ ಭಾಗ್ಯ ಬರಬೇಕಾದ್ರೆ ದೊಡ್ಡ ರೀತಿಯಲ್ಲೇ ಕಷ್ಟಪಡ್ಬೇಕು.

ಗೌಡ : ನನ್ನ ಪ್ರಾಣ ಬೇಕಾದ್ರೂ ಕೊಟ್ಟೇನು. ಗಂಗವ್ವ ಬರೋ ದಾರಿ ತೋರ್ಸಿ ಸ್ವಾಮಿ.

ಜೋಯಿಸ : ನಾನೇನು ಭಗೀರಥನೇ ಗೌಡ. ದೇವಲೋಕದ ಗಂಗೇನಾ ನಿನಗೆ ತಂದುಕೊಡೂದಕ್ಕೆ...

(ಇದ್ದಕ್ಕಿದ್ದಂತೆಯೇ ಏನೋ ಹೊಳೆದಂತಾಗಿ)

ನೋಡು ಭಗೀರಥನ ಜ್ಞಾಪಕ ಬಂದಿದ್ದರಿಂದ ಒಂದು

ಮಾತು ಹೇಳ್ತೀನಿ. ನಿನ್ನ ಹೆಸರುಬಲಕ್ಕೆ ಏಕೋ ಏನೋ ಈ ಬಾವಿಯಲ್ಲಿ ನೀರು ಬರೋ ಪುಣ್ಯ ಕಾಣ್ತಾ ಇಲ್ಲ. ನಿಮ್ಮ ಮನೆಯಲ್ಲಿ ಬೇರೆಯವರ ಹೆಸರುಬಲಕ್ಕೆ ಸರಿ ಬಂದ್ರೆ, ಅವರ ಕೈನಲ್ಲಿ ಗಂಗೆ ಪೂಜೆ ಮಾಡ್ಸಿ, ಬಾವಿ ಕೆಲ್ಸ ಮುಂದುವರಿಸು. ಹಾಗೇನಾದ್ರೂ ಒಂದು ವೇಳೆ ಒಳ್ಳೆಯದಾದ್ರೂ ಆಗಬಹುದು.

ಗೌಡ : ನನ್ನಂತ ಪಾಪಿಗೆ ಗಂಗವ್ವ ಬರೊಳ್ಳು ಅಂದ್ಮೇಲೆ ಹಂಗೆ ಮಾಡ್ಸಿ ಸ್ವಾಮಿ. ನನ್ನ ಜೀವ ಹೋಗೋಕೆ ಮುಂಚೆ ಕಲ್ಲನಕೇರೀಲಿ ಗಂಗವ್ವ ಬರೋದನ್ನ ನೋಡ್ಬೇಕು.... ನಮ್ಮ ಮನೇಲಿ ಯಾರ ಹೆಸರ್ಗೆ ಸರಿ ಬತ್ತದೆ ಅಂತ ನೋಡಿ ಸ್ವಾಮಿ.

[ನಡೆಯುತ್ತಿದ್ದ ಮಾತುಕತೆಯನ್ನು ಕಂಬದ ಹಿಂದೆ ನಿಂತು ಕೇಳಿಸಿಕೊಳ್ಳುತ್ತಿದ್ದ ಗೌಡರ ಪತ್ನಿ ಲಕ್ಷ್ಮಮ್ಮ ಒಳಕ್ಕೆ ಹೋಗಿ ಎಲೆ, ಹೂ, ಹಣ್ಣು ಮುಂತಾದ ಪೂಜಾ ಸಾಮಗ್ರಿಗಳಿಂದ ತುಂಬಿದ ತಟ್ಟೆಯನ್ನು ತಂದು ಜೋಯಿಸರ ಮುಂದೆ ಇಡುತ್ತಾ....]

ಲಕ್ಷ್ಮಮ್ಮ : ನಮ್ಮ ಮನೆ ಮಾನ ಉಳ್ಸಿ ಸ್ವಾಮಿ. ನನ್ನ ಬಲಿ ಕೊಟ್ಟಾದ್ರೂ ನೀರು ಬರುವಂಗೆ ಮಾಡ್ಸಿ. ಊರ ಮಂದಿ ಹತ್ರ ಆಡ್ಕೆ ಮಾತ ಕೇಳ್ತಾ ಬದುಕಿರೋದಕ್ಕೆ ನಮ್ಮ ಕೈಯಲ್ಲಿ ಆಗೋಲ್ಲ ಸ್ವಾಮಿ.

ಜೋಯಿಸ : ಅಶುಭದ ಮಾತು ಏಕಮ್ಮ ಆಡ್ತಿ, ಬಿಡ್ತು ಅನ್ನು. ಕಾಲದಿಂದಲೂ ನಿನ್ನ ಯಜಮಾನ ಊರಿನ ಹಿತಕ್ಕಾಗಿ ತನ್ನ ಜೀವಾನೆ ತೇದವ್ನೆ. ಬರ ಬಂದಿದ್ದಾಗ ಊರ್ಗೆಲ್ಲಾ ಗಂಜಿ ಕಾಯಿಸಿ ಹಂಚಿಸಿದಂತಹ ಪುಣ್ಯಾತ್ಮಂಗೆ ಎಂದೆಂದಿಗೂ ಕೆಟ್ಟ ಹೆಸರು ಬರೂದಿಲ್ಲ. ದೇವರ ಇಚ್ಛೆ ಏನಿದೆಯೋ? ಈ ರೀತಿ ಪರೀಕ್ಷೆ ಒಡ್ಡಿದ್ದಾನೆ.

ಲಕ್ಷ್ಮಮ್ಮ : ನಮ್ಮನೆ ದೇವರು ಇದ್ದಂಗೆ ಇದ್ದೀರಿ ಸ್ವಾಮಿ. ಏನಾದ್ರೂ ಮಾಡಿ ನಮ್ಮನೆ ಮಾನ ಉಳ್ಸಿ. ಊರಿಗೆ ಒಳ್ಳೇದ ಮಾಡಿ.

ಜೋಯಿಸ : ಎಲ್ಲಾ ಭಗವಂತನಿಗೆ ಸೇರಿದ್ದು, ಕುಳಿತ್ಕೊ.

[ಪಂಚಾಗವನ್ನು ನೋಡುವುದರಲ್ಲಿ ತಲ್ಲೀನರಾಗುತ್ತಾರೆ. ಸ್ವಲ್ಪ ಹೊತ್ತು ಏನನ್ನೋ ಗುಣಿಸುತ್ತಿದ್ದು]

ನೋಡಮ್ಮ, ನಿನ್ನ ಗಂಡ್ ಮಕ್ಕಳು.... ಹೆಣ್ ಮಕ್ಕಳು.....ಎಲ್ಲರ ಹೆಸರನ್ನು ಹೇಳು.

ಲಕ್ಷ್ಮಮ್ಮ : ನಮ್ಮ ದೊಡ್ಮಗ ಕೆಂಪೇಗೌಡ....ನಡುಕ್ಲೋನು ಈರೇಗೌಡ... ಕಿರಿಯೋನು ಮಾದೇಗೌಡ.

ಜೋಯಿಸ : (ಒಂದು ಹಾಳೆಯ ಮೇಲೆ ಗುರುತು ಹಾಕಿಕೊಂಡು)

ಸರಿ.... ಹಾಗೇನೆ ನಿನ್ನ ಹೆಣ್ಮಕ್ಕಳ ಹೆಸರು ಹೇಳು.

ಲಕ್ಷ್ಮಮ್ಮ : (ನಡುಗುವ ಕೊರಳಿನಿಂದ)

ನಮ್ಮ ತಿಮ್ಮಿ ಒಬ್ಳೆ ಅಲ್ವೇ ಸ್ವಾಮಿ ಹೆಣ್ ಮಗಳು ಇದ್ದೋಳು. ಅವಳು ಶಿವನ ಪಾದ ಸೇರ್‍ಕೊಂಡು ಆಗಲೇ ಐದು ವರ್ಷ ಆಯ್ತಲ್ಲ ಬುದ್ಧಿ.

(ಅಳತೊಡಗುತ್ತಾಳೆ)

ಜೋಯಿಸ : ಅಳ್ಬೇಡ ಸುಮ್ಮನಿರಮ್ಮ. ಕಾಲ ಬಂದಾಗ ಎಲ್ಲರೂ ಹೋಗಲೇಬೇಕಲ್ಲವೆ? ನಿನ್ನ ಸೊಸೇರ ಹೆಸರನ್ನು ಹೇಳು.

ಲಕ್ಷ್ಮಮ್ಮ : (ಕಣ್ಣೀರನ್ನು ಒರೆಸಿಕೊಳ್ಳುತ್ತ)

ಹಿರಿಯೋಳು ಮಲ್ಲವ್ವ.... ನಡುಕ್ಲೋಳು ಗೌರಮ್ಮ.... ಕಿರಿಯೋಳು ಭಾಗೀರತಿ.

ಜೋಯಿಸ : ಹ !.....ಕಡೆಯವಳು ಯಾರು ಅಂದೆ?

ಲಕ್ಷ್ಮಮ್ಮ : ಅದೇ ನಮ್ಮ ಭಾಗೀರತಿ.

ಜೋಯಿಸ : [ತುಸು ಗಳಿಗೆ ಏನನ್ನೋ ಗುಣಿಸಿ ಲೆಕ್ಕಾಚಾರ ಮಾಡತೊಡಗಿದರು. ಇದ್ದಕ್ಕಿದ್ದಂತೆಯೆ ಅವರ ಮುಖದಲ್ಲಿ ಹೊಸ ತೇಜಸ್ಸು ಹೊಳೆದಂತಾಯಿತು. ಕೂಡಲೇ ಉತ್ಸಾಹದಿಂದ]

ಗೌಡ, ನಿನ್ನ ಪಾಲಿನ ಪುಣ್ಯ ಚೆನ್ನಾಗಿದೆ. ಈ ಹೆಣ್ಣು ಮಗಳ ಹೆಸರಿಗೆ ಗಂಗೆ ಪೂಜೆ ಮಾಡುವ ಭಾಗ್ಯ ಚೆನ್ನಾಗಿದೆ. ಭಾಗೀರತಿ ಕೈನಲ್ಲಿ ಪೂಜೆ ಮಾಡ್ಸಿ ಬಾವಿ ಕೆಲಸ ಮುಂದುವರಿಸು. ಖಂಡಿತ ಶುಭವಾಗುತ್ತೆ.

ಗೌಡ : (ಆನಂದದಿಂದ)
ನಡೀರಿ ಸ್ವಾಮಿ, ಈಗ್ಲೇ ಮಾಡ್ಕೋಣ.

ಜೋಯಿಸ : (ಮತ್ತೆ ಸ್ವಲ್ಪ ಕಾಲ ಪಂಚಾಂಗದ ಕಡೆ ಕಣ್ಣಾಡಿಸಿ)
ಇವತ್ತು.... ನಾಳೆ.... ಎರಡು ದಿನವೂ ಬೇಡ ಕಣಯ್ಯಾ. ನಾಳಿದ್ದು ಶುಭ ಗಳಿಗೇಲಿ ಪೂಜೆ ಮಾಡ್ಸು. ಅಲ್ಲಿಯವರೆಗೆ ಸ್ವಲ್ಪ ನೆಮ್ಮದಿಯಿಂದಿರು.

ಗೌಡ : ನಾನು ಸುಮ್ನಿದ್ರೂ ನನ್ನ ಜೀವ ಸುಮ್ನಿರಲ್ದು ಅಯ್ನೋರೆ. ಗಂಗವ್ವನ ಕಾಣೋ ತನಕ ನನಗೆ ನೆಮ್ಮದೀನೆ ಇಲ್ಲ.

ಜೋಯಿಸ : ಆತುರ ಪಡಬೇಡ ಗೌಡ. ಒಳ್ಳೇದಾಗಬೇಕಾದ್ರೆ. ಅದಕ್ಕೂ ಕಾಲ ಕೂಡಿ ಬರ್ಬೇಕು.

ಗೌಡ : ಹೆಂಗೊ ಸ್ವಾಮಿ, ನೀವು ತೋರ್ಸಿದ ದಾರೀಲಿ ನಾವ್ ನಡೀತಿವಿ.

ಜೋಯಿಸ : ಅಂಥಾ ದೊಡ್ಡ ಮಾತು ನನಗ್ಯಾಕಪ್ಪ. ನಾವೆಲ್ಲರೂ ದೇವರು ತೋರ್ಸಿದ ದಾರಿಯಲ್ಲಿ ನಡೆಯಬೇಕಲ್ಲವೆ ?

ಗೌಡ : ನಿಜ ಸ್ವಾಮಿ. ಆದ್ರೆ ದೇವರು ನಾನಾ ರೂಪದಲ್ಲಿ ಬರ್ತಾನೆ. ಕಷ್ಟದಲ್ಲಿರೋನ್ಗೆ ಸರಿಯಾದ ದಾರಿ ತೋರ್ಸೊ ಇನ್ನೊಬ್ಬ ಮನುಸ್ನೆ ದೇವರಿಗೆ ಸಮ ಆಯ್ತಾನೆ.

ಜೋಯಿಸ : (ಗೌಡನ ನುಡಿಗಳಿಗೆ ಗಮನ ಕೊಡದೆ, ಮಾತನ್ನು ಬದಲಾಯಿಸುತ್ತಾ)
ನಾನಿನ್ನು ಬರ್ತೀನಿ ಗೌಡ. ಬೇರೆ ಸ್ವಲ್ಪ ಕೆಲಸ ಇದೆ.
(ಹೊರಡುವರು).

ಗೌಡ : ನಾಳಿದ್ದು ಎಷ್ಟು ಹೊತ್ತಿಗೆ ಬರ್ತೀರಿ ಬುದ್ಧಿ.

ಜೋಯಿಸ : ಬೆಳಗ್ಗೇನೆ ಬರ್ತೀನಿ. ಗಂಗೆ ಪೂಜೆಗೆ ಎಲ್ಲಾ ಸಿದ್ಧವಾಗಿರ್ಲಿ.
(ಜೋಯಿಸರು ಅಲ್ಲಿಂದ ಹೊರಡುತ್ತಾರೆ.)

ಗೌಡ : ಲಕ್ಷ್ಮಿ, ಕಡೆಗೂ ದೇವರು ಕಣ್ ಬುಟ್ಟ. ಊರ್ಗೆ ಗಂಗವ್ವ ಬಂದು, ನಮ್ಮ ಮನೆ ಮಾನ ಉಳಿವಂಗಾದ್ರೆ ಸಾಕು.

ಲಕ್ಷ್ಮಮ್ಮ : ಭಾಗೀರತಿ ಕಾಲ್ಗಡೇಲಿ ನಮ್ಮ ಮನೆಗೆ ಎಲ್ಲಾ ಒಳ್ಳೇದಾಗೈತೆ. ಹಂಗೇನೆ ಈಗ

ಬಂದಿರೂ ಕಷ್ಟಾನೂ ದೇವರು ಪಾರು ಮಾಡುಬುಟ್ರೆ ಸಾಕು.

ಗೌಡ : ಖಂಡಿತ ಒಳ್ಳೇದಾಯ್ತದೆ ಕಣೆ. ನಂಗೇನೊ ಆ ನಂಬ್ಕೆ ಅಯ್ತೆ. ಸ್ವಲ್ಪ ಬಾವಿ ಹತ್ರ ಹೋಗ್ಬತ್ತೀನಿ.

(ಎಂದು ಹೇಳಿ ತೆರಳುತ್ತಾರೆ.)

ಲಕ್ಷ್ಮಮ್ಮ : ಮಲೆಮಾದೇಶ್ವರ ಸ್ವಾಮಿ, ನಮ್ಮ ಮನೆತನಕ್ಕೆ ಬಂದಿರೂ ಈ ಕಷ್ಟಾನ ಹೆಂಗಾರು ಪಾರುಮಾಡಪ್ಪ. ಹನ್ನೆರಡು ಅರಬಿ ಹಾಲುತುಪ್ಪದ ಸೇವೆ ಮಾಡಿಸ್ತೀನಿ ನಿಂಗೆ.

(ಎಂದು ಹರಕೆಯನ್ನು ಕಟ್ಟಿಕೊಳ್ಳುತ್ತ ಒಳಕ್ಕೆ ಸರಿಯುತ್ತಾಳೆ).

ದೃಶ್ಯ - 3

[ಗೌಡರ ಮನೆಯ ಒಳಾಂಗಣಕ್ಕೆ ಹಿತ್ತಲ ಬಾಗಿಲಿನ ಕಡೆಯಿಂದ ಬಂದ ಸಿದ್ದ ಒಳಕ್ಕೆ ಬರುತ್ತಿದ್ದಂತೆಯೇ.....]

ಸಿದ್ದ : ಕೇಳ್ದೇನವ್ವ, ಊರಲ್ಲೆಲ್ಲಾ ಏನ್ ಗುಲ್ಲು ಹಬ್ಬೈತೆ ಅಂತ.

ಮಲ್ಲವ್ವ : ಏನೋ ಸಿದ್ದ, ಮೂಗಿನ ಹೊಳ್ಳೆ ಹಾರಿಸಿಕೊಂಡು ಹೇಳ್ತಾ ಇದ್ದೀಯಲ್ಲ. ಯಾರಾದ್ರೂ ನಿಂಗೆ ಇಲಿ ಹೋಯ್ತು ಅಂದ್ರೆ, ಹುಲಿ ಹೋಯ್ತು ಅನ್ನೋನು ನೀನು.

ಸಿದ್ದ : ನಮ್ಮಪ್ಪನಾಣೆಗೂ ಸುಳ್ಳುಪಳ್ಳು ಹೇಳೋನಲ್ಲ ಕಣವ್ವಾ ನಾನು. ಯಾರ ಬಾಯಲ್ಲಿ ನೋಡುದ್ರೂ ನಮ್ಮ ಭಾಗೀರತವ್ವನ ಸುದ್ದಿಯೇ ಆಗೈತೆ.

ಮಲ್ಲವ್ವ : ನಮ್ಮ ಭಾಗೀರತಿ ಸುದ್ದಿಯೆ? ಅದೇನ್ ಬಿಡ್ಸಿ ಹೇಳೊ ?

ಸಿದ್ದ : ಹೊತಾರೆ ಜೋಯಿಸಪ್ಪ ಬಂದಿದ್ದಾಗ, ಗೌಡ್ರಗೆ ಹೇಳದ್ರಂತೆ 'ಬಾವೀಲಿ ನೀರು ಬರಬೇಕಾದ್ರೆ ಬಿಮ್ಮನ್ಸೆ ಹೆಂಗ್ಸ ಬಲಿ ಕೊಡ್ಬೇಕು' ಅಂತ. ಅದ್ಕೆ ಗೌಡ್ರು ತಮ್ಮ ಕಿರಿಸೊಸೆ ಭಾಗೀರತಮ್ಮನ್ನೆ ಆವುತಿ ಕೊಟ್ಟು, ತಮ್ಮ ಮರ್ಯಾದೆ ಉಳಿಸ್ಕೊಬೇಕಂತ ಮನಸ್ಸು ಮಾಡವ್ರೆ. ನಾಳಿದ್ದು ಆ ಹೆಣ್ ಮಗೀನ ಬಾವಿಗೆ ಬಲಿ ಕೊಡ್ತಾರೆ ಅಂತ ಊರೆಲ್ಲಾ ಕುಣಿತಾಯ್ತೆ ಕಣ್ರವ್ವಾ. ನಾನೇನು ಕತೆ ಕಟ್ಟಿ ಹೇಳ್ತಾಯಿಲ್ಲ.

ಮಲ್ಲವ್ವ : (ಸ್ವಲ್ಪ ಗಾಬರಿಯಾಗಿ ಮತ್ತೆ ಚೇತರಿಸಿಕೊಂಡು)
ಹಾಳಾದ ಈ ಜನದ ಬಾಯ್ಗೆ ಬೀಗ ಹಾಕೋದಕ್ಕೆ ಆ ಭಗವಂತನ ಕೈಲೂ ಸಾಧ್ಯವಿಲ್ಲ. ಬಾವೀಲಿ ನೀರು ಬರದಿದ್ದಾಗ 'ಗೌಡ ಹೆಸರಿಗೋಸ್ಕರ ತೋಡ್ಸಿದ, ಅವನ ಹೆಸರೇ ಹಳಸ್ಕೋತು' ಅಂತ ಬಾಯಿಗೆ ಬಂದಂಗೆ ಇಲ್ಲದ ಸಲ್ಲದ್ದನ್ನೆಲ್ಲಾ ಸೇರ್ಸಿ ಬೈದ್ರು. ಈಗ ಭಾಗೀರತಿ ಕೈಲಿ ಗಂಗೆ ಪೂಜೆ ಮಾಡ್ಸೊ ವಿಷಯಕ್ಕೆ ಬಣ್ಣ ಕಟ್ಟಿ 'ಬಾವಿಗೆ ಬಲಿ ಕೊಡ್ತಾವ್ನೆ' ಅಂತ ಆಡ್ತಿದ್ದರೋ!.... ಅನ್ಲಿ.... ಏನಾದ್ರೂ ಅನ್ಕೊಳ್ಳಿ ಬಿಡು. ಮಾವಯ್ಯನ ಮನಸ್ಸು ಹಾಲಿನಂತಾದ್ದು. ಮಗಳಿಗಿಂತ ಹೆಚ್ಚಾಗಿರೋ ಭಾಗೀರತಿನ ಬಲಿ ಕೊಟ್ಟಾರ! ತಮ್ಮ ಪ್ರಾಣ ಕೊಟ್ಟಾರೆ ಹೊರ್ತು ಬೇರೆಯವ್ರ ಕೂದ್ಲೂ ಕೊಂಕೂದಕ್ಕೂ ಬಿಡೊಲ್ಲ.

ಸಿದ್ದ : ಧರ್ಮರಾಯನಂತಾವ್ರು ನಮ್ಮ ಗೌಡ್ರು. ಆದ್ರೆ ಎಕ್ಕುಟ್ಟೋದ ಜನ ಏನೇನೋ ಬಣ್ಣ ಕಟ್ಟಿ ಬಾಯ್ ಚಪಲ ತೀರಿಸ್ಕೋತಾರೆ.

(ಅಷ್ಟರಲ್ಲಿ ಯಾರೋ ಹೊರಗೆ ಸಿದ್ದ... ಸಿದ್ದ... ಎಂದು ಕೂಗುತ್ತಾರೆ)

ನಾ ಬತ್ತೀನಿ ಕನ್ರವ್ವಾ, ಯಾರೋ ಕೂಗ್ತಾವ್ರೆ.

(ಹೊರಡುತ್ತಾನೆ.)

ಮಲ್ಲವ್ವ : [ವ್ಯಥೆಪಡುತ್ತಾ ತನ್ನಲ್ಲಿಯೇ ಹೇಳಿಕೊಳ್ಳುತ್ತಾಳೆ.]

"ಊರಿಗೆ ಮಾಡೋ ಉಪ್ಕಾರ.... ಹೆಣಕ್ಕೆ ಮಾಡೋ ಸಿಂಗಾರ ಎರಡು ಒಂದೇ ಅಂತ" ಹಿರಿಯೋರು ಮೊದ್ಲೇ ಹೇಳವ್ರೆ. ನಮ್ಮ ಮಾವಯ್ಯ ಸುಮ್ನೆ ಇರನಾರದೆ.

"ಕೈ ತೋರ್ಸಿ ಅವಲಕ್ಷಣ ಅನ್ನಿಸ್ಕೊಂಡಂಗೆ" ಬಾವಿ ತೋಡ್ಸಿ ಜನದ ಬಾಯಿಗೆ ಬಿದ್ದರು.

[ಅಷ್ಟರಲ್ಲಿ ಅಲ್ಲಿಗೆ ಗೌರವ್ವ ಬರುತ್ತಾಳೆ.]

ಗೌರವ್ವ : ಅದೇನಕ್ಕ? ಒಬ್ಬೇ ನಿಂತ್ಕೊಂಡು ಮಾತಾಡ್ಕೋತಾ ಇದ್ದೀಯಲ್ಲ.

ಮಲ್ಲವ್ವ : ಕೇಳ್ದ ಹೊಸದೊಂದು ಸುದ್ದೀನಾ?

ಗೌರವ್ವ : ಬಾವಿ ತೋಡ್ಸೋಕೆ ಶುರು ಮಾಡುತ್ತಾವಿಂದ ಕೇಳಿ ಕೇಳಿ ಸಾಕಾಗಿದೆ. ಈಗ ಅಂತದೇ ಇನ್ನೊಂದು ಸುದ್ದಿ. ಅಂದ್ರೆ ಅನ್ಲಿ ಬುಡು.

(ಆದರೂ ಕುತೂಹಲದಿಂದ)

ಈಗ ಯಾವುದಕ್ಕ ಹೊಸ ಸುದ್ದಿ ?

ಮಲ್ಲವ್ವ : (ಮೆಲ್ಲನೆ ಕಿವಿಯಲ್ಲಿ ಎಲ್ಲವನ್ನೂ ಉಸುರಿಸಿ)

ಈ ವಿಷಯ ಭಾಗೀರತಿ ಕಿವೀಗೆ ಬಿದ್ರೆ, ಆ ಚೊಚ್ಚಲು ಬಸ್ರಿ ಎಷ್ಟು ಹೆದರ್ಕೊಂಡಳೋ ಏನೋ?

ಗೌರವ್ವ : ಅದ್ಕೆ ಏನೋ ನಡುಮಧ್ದೀನದಲ್ಲಿ ನಾನು ನೋಡ್ದಾಗ ಭಾಗೀರತಿ ಮಂಕಾಗೆ ಇದ್ಲು. ಜನರಾಡೋ ಮಾತು ಅವಳ ಕಿವೀಗೂ ಬಿದ್ದಿರ್ಬೇಕು.

ಮಲ್ಲವ್ವ : ಬಾ, ಅವಳ್ಗೆ ಸ್ವಲ್ಪ ಧೈರ್ಯನಾದ್ರೂ ಹೇಳೋಣ. ಬಿಮ್ಮನ್ಸೆ ಹೆಂಗಸ ಹತ್ರ ಗಂಡನಾದ್ರೂ ಇಂಥಾ ಸಮಯದಲ್ಲಿ ಇದ್ದಿದ್ರೇ ಚೆನ್ನಾಗಿರ್ತಿತ್ತು. ಭಾಗೀರತೀ...ಭಾಗೀರತೀ..

(ಎಂದು ಕರೆಯುತ್ತಾ ಒಳಕ್ಕೆ ಬರುತ್ತಾಳೆ. ಅಲ್ಲಿ ಕಾಣುವುದಿಲ್ಲ.)

ಗೌರವ್ವ : ಅತ್ತಮ್ಮನ ಹತ್ರ ಕುಂತ್ಕೊಂಡು ಭೋ ಹೊತ್ತು ಮಾತಾಡ್ತಾ ಇದ್ಲು. ಬಾಕ್ಕ ಅಲ್ಲೇ ನೋಡ್ಮ.

ಮಲ್ಲವ್ವ : ಭಾಗೀರತೀ...ಭಾಗೀರತೀ...

[ಎಂದು ಕರೆಯುತ್ತಾ ಮತ್ತೊಂದು ಕೊಠಡಿಗೆ ಬಂದಾಗ, ಅಲ್ಲಿ ಅವರ ಅತ್ತೆಯೊಬ್ಬರೇ ಇರುತ್ತಾರೆ.]

ಲಕ್ಷ್ಮಮ್ಮ : ಅವಳು ಇಲ್ಲ ಕಣವ್ವ. ಎಡಾಗಲಲ್ಲೇ ಅವರವ್ವನ್ನ ನೋಡ್ಕೊಂಡು ಬತ್ತೀನಿ ಅಂತ ಮಾದಿ ಜೊತೇಲಿ ತವರ್ಗೆ ಹೋದ್ಲು. ನಾಳೆ ಹೊತ್ತಾರೆನೆ ಬತ್ತೀನಿ ಅಂತ ಹೋಗವ್ಳೆ.

ಮಲ್ಲವ್ವ : ಜನ ಆಡ್ಕೋಳೋ ವಿಚಾರ ಕೇಳುದ್ರ ಅತ್ತಮ್ಮ.

ಲಕ್ಷ್ಮಮ್ಮ : ಕೇಳ್ದೆ ಕಣವ್ವಾ. ಹಾಳಾದ ಕಿವೀಲಿ ಇನ್ನೂ ಏನೇನ್ ಕೇಳ್ಬೇಕೋ. ಕಣ್ಣಲ್ಲಿ ಏನೇನ್ ನೋಡ್ಬೇಕೋ ನನಗಂತೂ ತಿಳೀವಲ್ದು. ಹಸುಮಗೀನಂತಾ ಮನಸು ನಮ್ಮ ಭಾಗೀರತೀದು. ಅವ್ಳಂತೂ ಜನ ಅನ್ನೋ ಮಾತು ಕೇಳಿ, ಅಲ್ಲೆ ಹೆದರಿ ಅಪ್ಪಳಿಸಿ ಹೋಗವ್ಳೆ. ಬಸ್ರಿ ಹೆಂಗ್ಸು ಹಿಂಗೆ ಬೆಚ್ಚದ್ರೆ ಹೊಟ್ಟೇಲಿರೂ ಕೂಸು ಉಳಿದೀತಾ. ನನಗಂತೂ ಏಕೋ ಏನೋ ಈ ಜನರ ಮಾತು ಕೇಳ್ದೇ ತಾವಿಂದ ಕೈಕಾಲೇ ಬಿದ್ಹೋದೊ ಕಣವ್ವ.

ಗೌರಮ್ಮ : ಜನರಾಡೋ ಮಾತು ನಿಜವಾ ಅತ್ತಮ್ಮ?

ಲಕ್ಷ್ಮಮ್ಮ : ಅಯ್ಯೋ ಬುಡ್ತು ಅನ್ನೇ ಗೌರಿ. ಎಲ್ಲಾದ್ರೂ ಉಂಟೇನೆ. ಭಾಗೀರತಿ ಕೈಲಿ ಗಂಗೆ

ಪೂಜೆ ಮಾಡ್ಸಿ, ಬಾವಿ ಕೆಲ್ಸ ಮುಂದುವರ್ಸಿ ಅಂತ ಜೋಯಿಸಪ್ಪ ಹೇಳುದ್ರೆ ಹೊರತು, ಇನ್ನೇನು ಇಲ್ಲ ಕಣವ್ವ. ಹಾಳಾದ್ ಜನ ಅದ್ನೆ ದೊಡ್ಡದು ಮಾಡ್ಕೊಂಡು ಹಿಂಗೆ ಕತೆ ಕಟ್ಟವ್ರೆ. ಹಂಗೇನಾದ್ರೂ ಆಗಿದ್ರೆ ನಾ ಸುಮ್ನಿರುತಿದ್ನ. ನನ್ನ ಜೀವ ಹೋದ್ರೂ ಚಿಂತಿಲ್ಲ, ನಮ್ಮ ಭಾಗೀರತೀನ್ನ ಬಾವಿ ಹತ್ರ ಕಳ್ಸೋಕೆ ಒಪ್ಪಿತ್ತಿದ್ನ!

(ಎನ್ನುತ್ತಿದ್ದಂತೆಯೇ ಯಾವುದೋ ಒಂದು ಬಗೆಯ ಯಾತನೆಯಿಂದ ಕಣ್ಣಲ್ಲಿ ಹನಿ ತುಂಬುತ್ತದೆ)

ಮಲ್ಲವ್ವ : [ಅತ್ತೆಯ ಮನದ ಸಂಕಟವನ್ನು ಕಡಿಮೆ ಮಾಡಲೆಂದು]

ಸುಮ್ಕಿರಿ ಅತ್ತಮ್ಮ. ಆಡೋ ಜನ ಆಡ್ತಾ ಇರ್ಲಿ. ಬಾವೀಲಿ ನೀರ್ ಬರೋ ತನಕ ಕಿವಿ ಮುಚ್ಕೊಂಡು ನಮ್ಮ ಪಾಡಿಗೆ ನಾವು ಇರೋಣ.

ಅಂಕ - ಎರಡು

ದೃಶ್ಯ - 1

[ಭಾಗೀರಥಿಯ ತೌರಿನಲ್ಲಿ ಆಕೆಯ ತಂದೆ ಮತ್ತು ತಾಯಿ ಸಂಭಾಷಣೆಯಲ್ಲಿ ತೊಡಗಿದ್ದಾರೆ.]

ತಿಮ್ಮವ್ವ : ಏಕೋ ಮಗೀನ ಮೊಕವೇ ಇಳಿದ್ಹೋಗ್ಯೆತೆ. ಏನ್ ಚಿಂತೆ ಮಾಡ್ತಿದ್ದಳೊ ಏನೋ?

ರಾಮೇಗೌಡ : ನನ್ ಕಣ್ಗೆ ಹಂಗೇನು ಕಾಣ್ಲಿಲ್ಲ. ಅತ್ತೆ ಮನೆಗೆ ಹೋದ ಹೊಸದ್ರಲ್ಲಿ ಒಂದೆರಡು ವರ್ಷ ಹಂಗೇ ತಾನೆ ಎಲ್ಲಾ ಹೆಣ್ ಮಕ್ಕಳು.

ತಿಮ್ಮವ್ವ : ಇಷ್ಟು ದಿವ್ಸ ನಗನಗ್ತಾ ಬತ್ತಿದ್ದೋಳು, ಇವತ್ತು ಹಿಂಗಿರಬೇಕಾದ್ರೆ ಅತ್ತೆಗೂ ಸೊಸೆಗೂ ಏನಾರ ನಡ್ದಿರಬೇಕು?

ರಾಮೇಗೌಡ : ಅವಳತ್ತೆ ಏನು ನಿನ್ನಂಗೆ ಘಾಟಿಯೇ! ಅತ್ತೆ ಮನೇಲಿ ನಮ್ಮ ಭಾಗೀರತಿ ಮಗಳಿದ್ದಂಗವ್ಳೆ ಅಂತ ನೀನೆ ಹೇಳ್ತಿರಲಿಲ್ವೇ ಇಷ್ಟು ದಿವ್ಸ.

ತಿಮ್ಮವ್ವ : ಅಲ್ಲ, ಏನಾದ್ರೂ ಮೊಕಮುನ್ಸು ಈಗ ಬಂದಿದ್ರೆ.

ರಾಮೇಗೌಡ : ಅಲ್ಲಾನು ಇಲ್ಲ.... ಬೆಲ್ಲಾನು ಇಲ್ಲ. ನಡ್ ನಡೀ.... ಏನಾದ್ರು ಆರೈಕೆ ಮಾಡಿ ಒಂದೆರಡು ದಿವ್ಸ ಚೆಂದಾಗಿ ನೋಡ್ಕೊ.

ತಿಮ್ಮವ್ವ : ಅವಳು ಇರೋದಿಲ್ವಂತೆ. ನಾಳಾಕೆ ಹೊತ್ತಿಗೆ ಮುಂಚೇನೆ ಹೋಗ್ಬೇಕು ಅಂತ ಹೇಳ್ತಾಯಿದ್ಲು.

ರಾಮೇಗೌಡ : ಹಿಂಗ್ ಬಂದು, ಹಂಗ್ ಹೋಗೂಕೆ ಯಾಕೆ ಬಂದ್ಳಂತೆ?

ತಿಮ್ಮವ್ವ : ಅದೇ ನಂಗೂ ತಿಳೀತಾಯಿಲ್ಲ.

ರಾಮೇಗೌಡ : ಕರಿ ಅವಳ್ನ. ನಾನೇ ಕೇಳ್ತೀನಿ.

ತಿಮ್ಮವ್ವ : ಭಾಗೀರತೀ....ಭಾಗೀರತೀ.
(ಒಳಗಡೆಯಿಂದ ಭಾಗೀರತಿಯ ಅಕ್ಕ ದೊಡ್ಡೋಳು ಬರುತ್ತಾಳೆ.)

ದೊಡ್ಡೋಳು : ಇಲ್ಲ ಕಣವ್ವ ಅವಳು ಪಾರ್ವತಿ ಮನೆಗೆ ಹೋಗವ್ಳೆ.

ತಿಮ್ಮವ್ವ : ಪಾರ್ವತಿ ಅಂದ್ರೆ ಅವಳ್ಗೇನ್ ಜೀವಾನೋ! ಗಂಡನ್ನ ಬೇಕಾದ್ರೂ ಬುಟ್ಟು ಇದ್ದಾಳು.... ಆದ್ರೆ ಪಾರ್ವತೀನ ಬುಟ್ಟು ಇರನಾರಳು.

ರಾಮೇಗೌಡ : ಚಿಕ್ಕಂದಿನಿಂದ್ಲೂ ಅವಳಿ ಮಕ್ಕಂಗೆ ಜೊತೇಲಿ ಬೆಳೆದೋರಲ್ವೆ ಅವರಿಬ್ಬರು. ಅದ್ಕೆ ಅಂಥಾ ಪ್ರೀತಿ.

ತಿಮ್ಮವ್ವ : ದೊಡ್ಡೋಳೆ, ನಿಂಗೇನಾರ ಗೊತ್ತ ? ಭಾಗೀರತಿ ಯಾಕೆ ಭೋ ಇಳಿದು ಹೋಗವ್ಳೆ ಅಂತ.

ದೊಡ್ಡೋಳು : ನಾನು ಅದ್ನೆ ಕೇಳ್ದೆ ಕಣವ್ವ. ಏನು ಬಾಯೇ ಬುಡ್ಲಿಲ್ಲಾ.

ತಿಮ್ಮವ್ವ : ಮನೇಲಿ ಏನಾರ ಓರಾರ್ಗಿತ್ತೀರ್ಗೆ ಜಗಳವೋ?

ದೊಡ್ಡೋಳು : ಒರಾರ್ಗಿತ್ತೀರು ಅಕ್ಕತಂಗೇರು ಇದ್ದಂಗವ್ರೆ ಅಂತ ಮಾದಿ ಹೇಳುದ್ಲು.

ರಾಮೇಗೌಡ : [ಸ್ವಲ್ಪ ಬೇಸರದಿಂದ]
ನಿಮ್ಮವ್ವನ ತಲೇನೆ ಹಂಗೆ. ಇರೂದ ಇಲ್ಲ ಅಂತಾಳೆ; ಇಲ್ಲದ್ದ ಅದೆ ಅಂತಾಳೆ. ಬಿಸಲಲ್ಲಿ ನಡ್ಕೊಂಡು ಬಂದುದ್ಕೊ ಏನೋ ಮಗ ಒಸಿ ಸಪ್ಪಗಿದ್ರೆ, ಅದ್ನೆ ದೊಡ್ಡದು ಮಾಡ್ಕೊಂಡು ನಿಮ್ಮವ್ವ ಆಡ್ತಾವ್ಳೆ.

ತಿಮ್ಮವ್ವ : 'ಗಂಡ್ಸಿಗೇನ್ ಗೊತ್ತು ಗೌರಿ ದುಃಖ' ಅಂತ ಮೊದ್ಲೆ ಗಾದೇನೆ ಇಲ್ವೆ. ಹೆಣ್ಮಕ್ಳ ಕಷ್ಟ ನಿಮಗೇನ್ ಗೊತ್ತಾದೀತು? ಅನುಭವಿಸ್ದೋರ್ಗೆ ಗೊತ್ತು.

ರಾಮೇಗೌಡ : ಏನಮ್ಮಿ, ಅತ್ತೆ ಮನೇಲಿ ಭೋ ಕಷ್ಟ ಅನುಭವಿಸ್ದೋಳಂಗೆ ಮಾತಾಡ್ತಾ ಇದ್ದೀಯಲ್ಲ ?

ತಿಮ್ಮವ್ವ : ಬುಡ್ತು ಅನ್ನಿ. ನಮ್ಮತ್ತೇನ ತಂಪೊತ್ನಲ್ಲಿ ನೆನ್ಕೊ ಬೇಕು. ಅತ್ತೆ ಸೊಸೆ ಇಷ್ಯಾನಲ್ಲ ನಾ ಹೇಳಿದ್ದು. ಮಗೀನ ಮನದಲ್ಲಿ ಏನಾದ್ರೂ ಬಯಕೆ ಇದ್ದದೋ? ಅದ್ಕೇನಾದ್ರೂ ಹಿಂಗೆ ಮಂಕಾಗಿದ್ದಾಳೋ?

ರಾಮೇಗೌಡ : (ತೀವ್ರವಾದ ಅಸಹನೆಯಿಂದ)

ಮಾಡೋಕೆ ನಿಂಗೂ ಏನೂ ಗೇಮೆಯಿಲ್ಲ. ಅದ್ಕೆ ಹಿಂಗೆಲ್ಲಾ ಆಡ್ತಾ ಇದ್ದೀಯೆ. (ಕೋಪದಿಂದ)

ಎದ್ದೋಗಮ್ಮಿ, ಏನಾರು ಮಾಡ್ಲೋಗು.
(ಎಂದು ಅಬ್ಬರಿಸುತ್ತಾ ಹೊರಕ್ಕೆ ಹೋಗುತ್ತಾನೆ.)

ತಿಮ್ಮವ್ವ : (ಗಂಡ ಮರೆಯಾಗುವ ತನಕ ಸುಮ್ಮನಿದ್ದು.)

ದೊಡ್ಡೋಳೆ ನಮ್ಮ ಮಗೀನ ಮೊಕ ನೋಡುದ್ರೆ ನಂಗ್ಯಾಕೊ ಒಂಥರಾ ಕಳ್ಳೇ ಕತ್ತರಿಸ್ದಂಗೆ ಆಯ್ತುದೆ ಕನಮ್ಮಿ. ಅವಳ್ಗೇನೋ ದೊಡ್ಡ ಯೋಚ್ನೆ ಬಂದಂಗೈತೆ. ನೀನಾರ ಒಸಿ ಪೀಡ್ಸಿ ಕೇಳಮ್ಮಿ.

ದೊಡ್ಡೋಳು : ನೀನೆ ಕೇಳವ್ವ. ನಂಗೆ ಬಾಯ್ ಬುಡಳ್ಳು.

ತಿಮ್ಮವ್ವ : ನನ್ನ ಕೈಲಿ ಆಗ್ದೇ ಹೋದತ್ಕಲ್ವೇ ನಿಂಗೆ ಹೇಳ್ತಾ ಇರೋದು. ಅವಳು ಬಂದೇ ತಾವಿಂದ ಏನೇನೋ ಮಾಡಿ ಕೇಳ್ತಲೇ ಇವ್ನಿ, "ಏನೂ ಇಲ್ಲ ಕನವ್ವ. ನಿನ್ನೂ ಅಪ್ಪನ್ನೂ ನೋಡುವಂಗಾಯ್ತು, ಅದ್ಕೆ ಬಂದೆ'' ಅಂದ್ಯೆ ಹೊರ್ತು, ಬ್ಯಾರೆ ಇನ್ನೇನು ತುಟಿಕ್ ಪಿಟಿಕ್ ಅನ್ನಲಿಲ್ಲ.

ದೊಡ್ಡೋಳು : ಗಂಡ ದಂಡಿಗೆ ಹೋಗವ್ನೆ ಅಂತ ಏನಾರು ಹೆದರಿಕೊಂಡಿದ್ದಳೋ?

ತಿಮ್ಮವ್ವ : ಹಂಗೇನಾದ್ರೂ ಇದ್ರೂ ಇರ್ಬೇಕನಮ್ಮಿ. ಗಂಡನ ಇಷ್ಯ ಕೇಳ್ದಾಗ, ಕಣ್ಣಲಿ ಒಸಿ ನೀರಾಡ್ತಿದ್ದೊ.

ದೊಡ್ಡೋಳು : ನೀನೆ ಒಸಿ ಧೈರ್ಯ ಹೇಳವ್ವ. ದಂಡಿಗೆ ಹೋದೋರೆಲ್ಲಾ ಏನು ಸತ್ತು ಹೋದಾರ.... ಅದಕ್ಯಾಕೆ ಅಷ್ಟು ಚಿಂತೆ. ಎಲ್ರು ಪಾಲ್ಗೂ ಆ ನಮ್ಮವ್ವ ಪಟಲದವ್ವನೇ ಗತಿ ಅಲ್ವೇ.

ತಿಮ್ಮವ್ವ : (ಹೊರಬಾಗಿಲ ಕಡೆ ನೋಡುತ್ತ)
ಕತ್ತಲಾದ್ರು ಮನೆಯಿಂದ ಇನ್ನೂ ಬರ್ಲೇ ಇಲ್ವಲ್ಲ. ನೀನು ಹೋಗಿ ಅತ್ತಲಿಂದ ಜೊತೇಲಿ ಬರೋಗು. ಬರ್ರಾಗ ಹೆಂಗಾರ ವೈನ ಮಾಡಿ ಕೇಳು. ನೋಡವ ಹಂಗೇನಾದ್ರೂ ಬಾಯ್ ಬುಟ್ಟಾಳ ಅಂತ.
(ದೊಡ್ಡೋಳಿಗೆ ಸೂಚನೆ ಕೊಟ್ಟು ಕಳುಹಿಸುತ್ತಾಳೆ.)

ದೃಶ್ಯ-2

[ಪಾರ್ವತಿಯ ಮನೆಯ ಕೊಠಡಿಯೊಂದರಲ್ಲಿ ಗೆಳತಿಯರಿಬ್ಬರು ಮಾತನಾಡುತ್ತ ಕುಳಿತಿದ್ದಾರೆ. ಇಬ್ಬರ ಮುಖದಲ್ಲೂ ಚಿಂತೆ ಮಡುಗಟ್ಟಿದೆ.]

ಪಾರ್ವತಿ : ನೀ ಹೇಳೋದ್ನೆಲ್ಲಾ ಕೇಳ್ತಾ ಇದ್ರೆ, ನಂಗಂತೂ ಏನೂ ತೋಚಲ್ಲು ಕಣೆ.

ಭಾಗೀರಥಿ : ಏನೋ ಪಾರ್ವತಿ, ಅದ ನೆನೆಸ್ಕೊಂಡಂಗೆಲ್ಲಾ ಎದೆಯೇ ನಡಗ್ತದೆ.

ಪಾರ್ವತಿ : ಅಯ್ನೋರು ಗಂಗೆ ಪೂಜೇನಾ ನಿನ್ನ ಕೈಲೆ ಮಾಡಿಸ್ಬೇಕಂತ ಹೇಳ್ದಾಗ, ನೀನಲ್ಲೇ ಇದ್ದ?

ಭಾಗೀರಥಿ : ಹೂ ಕಣೆ. ನಾವ್ ಓರಾರ್ಗಿತ್ತೀರು ಅಲ್ಲೇ ಕೋಣೆ ತಾವು ಕುಂತ್ಕೊಂಡು ಕೇಳ್ತಿದ್ವೊ.

ಪಾರ್ವತಿ : ಹಂಗಾದ್ರೆ ಧೈರ್ಯವಾಗಿರು. ಹಾಳಾದ್ ಜನದ ಬಾಯೇ ಹಂಗೆ. ಅನಿಷ್ಟದೋರು ಕರೀದ ಬಿಳೀದ್ ಮಾಡ್ತಾರೆ; ಬಿಳೀದ ಕರೀದ್ ಮಾಡ್ತಾರೆ.

ಭಾಗೀರಥಿ : [ಏನನ್ನೋ ಹೇಳಲು ಬಾಯ್ದೆರದು ಹೇಳಲಾಗದೆ ಸುಮ್ಮನಾಗುತ್ತಾಳೆ. ಒಂದು ಗಳಿಗೆಯ ನಂತರ]
ಪಾರ್ವತೀ...

ಪಾರ್ವತಿ : ಏನೇ....

ಭಾಗೀರಥಿ : ಒಂದು ವೇಳೆ ಜನ ಅನ್ನುವಂಗೆ ಗಂಗೆ ಪೂಜೆ ಮಾಡೋಕ್ಹೋದಾಗ ನಾನ್ ಸತ್ತೋಗ್‌ಬುಟ್ರೆ.

ಪಾರ್ವತಿ : ಬುಡ್ತು ಅನ್ನೆ. ಕೆಟ್ಟದ್ದನ್ನ ಯಾಕೆ ಹಾರೈಸ್ಕೋತಿ?

ಭಾಗೀರಥಿ : ನನ್ನ ಮಗೀನ ಕಣ್ ತುಂಬ ನೋಡ್ಡೋಕ್ ಮೊದ್ಲೆ ನಾ ಸಾಯುವಂಗಾಯ್ತಲ್ಲೆ.
(ಎನ್ನುತ್ತಿದ್ದಂತೆಯೇ ಕಂಠ ತುಂಬಿ ಬರುತ್ತದೆ.)

ಪಾರ್ವತಿ : ನನ್ನಾಣೆ ಭಾಗೀರತಿ, ನೀ ಇನ್ನೊಂದ್ ಸತಿ ಸಾಯೊ ವಿಷಯ ಮಾತಾಡುದ್ರೆ. ಯಾವತ್ತೂ ಬಾಯ್ಲಿ ಒಳ್ಳೇದ್ನೆ ಆಡ್ಬೇಕು ಕಣೆ.

ಭಾಗೀರಥಿ : (ತಡೆಯಿಲ್ಲದೆ ಹರಿದು ಬರುತ್ತಿರುವ ಕಂಬನಿಗಳನ್ನು ಸೆರಗಿನಿಂದ ಒರೆಸಿಕೊಳ್ಳುತ್ತಿರುತ್ತಾಳೆ.)

ಪಾರ್ವತಿ : ಜನ ಅಂದಂಗೆಲ್ಲಾ ಆಗ್ಹೋಗುವಂಗಿದ್ರೆ, ದೇವ್ರು ದಿಂಡ್ರು ಏಕಿರ್ಬೇಕಾಗಿತ್ತು! ಇಲ್ಲದ್ನೆಲ್ಲಾ ಕರ್ಕ್ಯೋಬೇಡ. ಹಾಳಾದ ಜನದ ಮಾತ್ನ ತಲೇಗೆ ಹಾಕ್ಕೊಂಡು ಹೆದರ್ಕ್ಯೋಬ್ಯಾಡ.

ಭಾಗೀರಥಿ : (ಏನನ್ನೋ ನೆನಿಸಿಕೊಂಡಂತೆಲ್ಲಾ ಮತ್ತೆ ಬಿಕ್ಕಿ ಬಿಕ್ಕಿ ಅಳಲಾರಂಭಿಸುತ್ತಾಳೆ.)

ಪಾರ್ವತಿ : (ಭಾಗೀರಥಿಯು ಪಡುತ್ತಿರುವ ಸಂಕಟವನ್ನು ಕಂಡು ಪಾರ್ವತಿಯ ಕಣ್ಣುಗಳು ಹನಿಗೂಡುತ್ತವೆ. ತನ್ನ ಸಂಕಟವನ್ನ ಬಹಿರಂಗಪಡಿಸಿದರೆ, ಭಾಗೀರಥಿ ಎಲ್ಲಿ ಮತ್ತಷ್ಟು ಹೆದರುವಳೋ ಎಂಬ ಭಯದಿಂದ, ಅದನ್ನು ಹಾಗೇ ಹತ್ತಿಕ್ಕಿಕೊಂಡು)

ನೀ ಅಳೋದ ನನ್ನ ಕೈಲಿ ನೋಡೋಕಾಗಲ್ಲ. ನಿನ್ನ ಕಾಲ್ನಾದ್ರೂ ಕಟ್ಕೋತಿನಿ ಸುಮ್ನಿರೆ. ನಿಂಗೇನೂ ಆಗೋಲ್ಲ. ದೇವ್ರ ಮೇಲೆ ಭಾರ ಹಾಕಿ ಧೈರ್ಯವಾಗಿರು.

[ತನ್ನ ಪಾದಗಳತ್ತ ಇಡುತ್ತಿದ್ದ ಪಾರ್ವತಿಯ ಕೈಗಳನ್ನು ಹಿಡಿದುಕೊಂಡು, ಭಾಗೀರಥಿಯು ತನ್ನ ಅಳುವನ್ನು ಬಲವಂತವಾಗಿ ಹತೋಟಿಗೆ ತಂದುಕೊಳ್ಳುತ್ತಾ, "ಇನ್ನು ಅಳುವುದಿಲ್ಲ'' ಎಂಬ ಭಾವವನ್ನು ತಲೆಯಲ್ಲಾಡಿಸುವುದರ ಮೂಲಕ ಸೂಚಿಸುತ್ತಾಳೆ. ಒಂದು ಗಳಿಗೆ ಗೆಳತಿಯರು ಹಾಗೆಯೇ ಕೈ ಕೈ ಹಿಡಿದು ಕುಳಿತಿರುತ್ತಾರೆ. ಭಾಗೀರಥಿಯನ್ನೇ ದಿಟ್ಟಿಸಿ ನೋಡುತ್ತಿದ್ದ ಪಾರ್ವತಿಗೆ ಏನೋ ಹೊಳೆದಂತಾಗಿ]

ಪಾರ್ವತಿ : ಭಾಗೀರತಿ, ನಂಗೊಂದು ಯೋಚ್ನೆ ಹೊಳಿತಾದೆ. ಹೆಂಗಿದ್ರೂ ಗಂಗೆ ಪೂಜೆ ಮಾಡೋದು ನಾಳಿದ್ದು ಶುಕ್ರವಾರ ತಾನೇ, ಅಲ್ಲಿಗಂಟ ನೀನು ಅಲ್ಲಿಗೆ ಹೋಗುದೆ ಬ್ಯಾಡ.... ಇಲ್ಲೇ ಇದ್ಬುಡು.

ಭಾಗೀರಥಿ : ನಾ ಸೇರಿರು ಮನೇಗೆ ಕೆಟ್ಟ ಹೆಸ್ರು ತರ್ಲೇನೆ ?

ಪಾರ್ವತಿ : ಅದರಲ್ಲಿ ಎಂಥದೆ ಕೆಟ್ಟ ಹೆಸ್ರು. ಬಿಮ್ಮನ್ಸೆ ಹೆಂಗ್ಸು ಹೆದರ್ಕ್ಕೊಂಡ್ಲು.. ಅದ್ಕೆ ಬರ್ಲಿಲ್ಲ ಅನ್ಕೊತರೆ.

ಭಾಗೀರಥಿ : ನಾನು ಹಂಗೆ ಮಾಡುದ್ರೆ ನಮ್ಮ ಮಾವನ ಬಾಳು ನಗೋರ ಮುಂದೆ ಜಾರಿ ಬಿದ್ದಂಗಾಗೊಲ್ವೆ.

ಪಾರ್ವತಿ : ಅದು ಅವರ ಗ್ರಾಚಾರ. ಜನರ ಕೈಲಿ ಅನ್ನಿಸ್ಕೊಂಡು ನರಳ್ಬೇಕು ಅಂತ ಹಣೇಲಿ ಬರ್ದಿರುವಾಗ ಅನ್ನಿಸ್ಕೊಳ್ಳಿ ಬುಡು.

ಭಾಗೀರಥಿ : ನಮ್ಮ ಮಾವ ಭೋ ಮಾನಸ್ಥ ಕಣೆ. ಕಲ್ಲನಕೇರಿ ಗೌಡ್ರು ಅಂದ್ರೆ ಆ ಸುತ್ಗೇ ಹೆಸರುವಾಸಿ. ಬಾವೀಲೇನಾರ ನೀರು ಬರ್ದೇ ಹೋದ್ರೆ, ಖಂಡ್ತ ನಮ್ಮ ಮಾವಯ್ಯ ಉಳಿಯೋದಿಲ್ಲ ಕಣೆ.

ಪಾರ್ವತಿ : ಸತ್ರೆ ಸಾಯ್ತಾನೆ ಹಾಕು.

ಭಾಗೀರಥಿ : ಬುಡ್ತು ಅನ್ನೇ ಪಾರ್ವತಿ, ಸಾವಿರ ಸರ್ತಿ ಬುಡ್ತು ಅನ್ನೆ. ನಮ್ಮ ಮಾವಯ್ಯನಂಥಾ ಮಾವನಾದ್ರೂ ಸಿಕ್ತಾರೇನೆ. ಅಂಥಾ ಮಾವಯ್ಯನ ಕಳ್ಕೊಂಡ್ಮೇಲೆ ನಾವಿದ್ರೂ ಒಂದೆ, ಸತ್ರೂ ಒಂದೆ.

ಪಾರ್ವತಿ : (ಒಂದು ಗಳಿಗೆ ಸುಮ್ಮನಿದ್ದು ಮತ್ತೆ ಏನೋ ಹೊಳೆದಂತಾಗಿ)
ಹೋಗ್ಲಿ ಹಿಂಗ್ಮಾಡುದ್ರೆ.

ಭಾಗೀರಥಿ : ಹೆಂಗೆ?

ಪಾರ್ವತಿ : ನಿಮ್ಮಪ್ಪಂಗೂ ಅವ್ವಂಗೂ ಇದ್ನೆಲ್ಲಾ ಹೇಳ್ಬುಟ್ಟು, ಅವರು ಹೆಂಗೆ ಹೇಳ್ತಾರೆ ಹಂಗ್ಮಾಡು.

ಭಾಗೀರಥಿ : (ಉದ್ವಿಗ್ನತೆಯಿಂದ)
ಮಾವನ ಮೇಲೆ ದೂರು ಹೇಳಿ, ಅವರ್ಗೆ ಹಗೆಯಾಗುವಂಗೆ ತೌರ್ನೋರ ಎತ್ತಿಕಟ್ಟಲೇನೆ?

ಪಾರ್ವತಿ : ಮೊದ್ಲಿಂದ್ಲು ನೀ ಹಿಂಗೇನೆ ಕಣೆ. ನಿಂಗೆ ಏನು ಬಂದ್ರು ಪರ್ವಾಗಿಲ್ಲ. ಬೇರೆಯವರ್ಗೆ ಮಾತ್ರ ನಿನ್ನಿಂದ ಒಂದ್ ಚೆಂಕ್ರಾನು ನೋವಾಗ್ಬಾರದು. ಹಿಂಗಾದ್ರೆ ಧರೆ ಮೇಲೆ ಬದುಕೋದು ಹೆಂಗೆ?

ಭಾಗೀರಥಿ : ಗಂಡನ ಮನೆ ಮ್ಯಾಲೆ ಗೂಬೆ ಕುಂಡ್ಸಿ ನಾವು ಸುಖಪಡೋಕಾಗುತ್ತೇನೆ. ಹಂಗೆಲ್ಲಾ ಕೆಟ್ಟ ಯೋಚ್ನೆ ಮಾಡ್ಲೇಬಾರ್ದು.

ಪಾರ್ವತಿ : (ಬಹಳ ನಿರಾಶೆಯಿಂದ)
ಮತ್ತೆ, ಈಗೇನ್ ಮಾಡ್ತೀಯ?

ಭಾಗೀರಥಿ : [ಭಾಗೀರಥಿಯ ಮುಖದಲ್ಲಿ ಒಂದು ಬಗೆಯ ಗಂಭೀರಭಾವ ಎದ್ದು ಕಾಣತೊಡಗಿತು. ಅಳುವಾಗ ಮುಖದ ಮೇಲೆ ಉರುಳಿದ್ದ ಕಂಬನಿಯ ಗೆರೆಗಳು ಈಗ ಸ್ವಲ್ಪ ಒಣಗಿದ್ದವು. ಪಾರ್ವತಿಯತ್ತ ಮೌನದಿಂದ ನೋಡುತ್ತಿದ್ದಳು.]

ಪಾರ್ವತಿ : ಇದ್ಯಾಕೆ, ಹಿಂಗ್ ಕುತ್ಕೊಂಡೆ?

ಭಾಗೀರಥಿ : “ಕೊಟ್ಟ ಹೆಣ್ಣು ಕುಲಕ್ಕೆ ಹೊರಗು'' ಅಂತ ನೀ ಕೇಳಿಲ್ವ?

ಪಾರ್ವತಿ : ಕೇಳಿವ್ನಿ.

ಭಾಗೀರಥಿ : ಅಂದ್ಮೇಲೆ, ನಾವು ಯಾವತ್ತಿದ್ರೂ ಹುಟ್ಟಿದ ಮನೆಗೆ ದೂರು ತರಬಾರ್ದು. ಹೋದ ಮನೆಗೆ ಕಪ್ಪು ಹಚ್ಚಬಾರದಲ್ವೇ?

ಪಾರ್ವತಿ : ಹೂ.

ಭಾಗೀರಥಿ : ಹಿರಿಯೋರ್ ಹೇಳ್ದಂಗೆ ಬಾಳುದ್ರೆ ಅಲ್ವೇನೆ, ನಮ್ಮ ಜನ್ಮ ಸಾರ್ಥಕ ಆಗೋದು.

ಪಾರ್ವತಿ : (ಕಾತರವನ್ನು ತಡೆಯಲಾರದೆ)
ಈಗೇನ್ ಮಾಡ್ಬೇಕಂತ ಇದ್ದೀಯೆ?

[ಪಾರ್ವತಿಯ ಪ್ರಶ್ನೆಗೆ ಉತ್ತರ ಕೊಡುವ ಮುನ್ನವೇ, ಬಾಗಿಲ ಬಳಿಯಿಂದಲೇ ಎತ್ತರದ ಧ್ವನಿಯಲ್ಲಿ “ಭಾಗೀರತಿ...ಭಾಗೀರತಿ'' ಎಂದು ಕೂಗುತ್ತಾ ದೊಡ್ಡೋಳು ಇವರ ಬಳಿಗೆ ಬರುತ್ತಿದ್ದಂತೆಯೆ..]

ದೊಡ್ಡೋಳು : ಏನೇ ಇಷ್ಟೊತ್ತು ಕುಂತ್ಕೊಂಡುಬುಟ್ಟೆ.
(ಇಬ್ಬರ ಕಡೆಗೂ ನೋಡುತ್ತಾ)
ಆಹಾ! ಗೆಣ್ತೇರು ಅಂದ್ರೆ ಇನ್ಯಾಕೆ ಕಿತ್ತರೆ ಕಿಳ್ನಾರದಂಗಿದ್ದೀರಿ!

ಪಾರ್ವತಿ : ಬಾಕ್ಕ ಕುಂತ್ಕೊ ಬಾ. ಏನೀಗ ಆತ್ರ. ಉಣ್ಕೊಂಡು ಹೋಗೂರಂತೆ.

ದೊಡ್ಡೋಳು : ಇಲ್ಲ ಕಣ್ ಪಾರ್ವತಿ. ಮೊಗ ಕೈನೇ ಬುಡಲ್ತು. ಅವ್ವನ ಕೈಲಿ ಕೊಟ್ಟು ಬಂದಿವ್ನಿ. ಅವ್ವ ಕಾಯ್ತಿರ್ತಾಳೆ.

[ಭಾಗೀರಥಿ ಎದ್ದು ಅಕ್ಕನ ಜೊತೆ ಹೊರಡಲು ಸಿದ್ಧಳಾಗುತ್ತಾಳೆ]

ದೃಶ್ಯ-3

[ಮಲ್ಲನಗೌಡರು ತಮ್ಮ ಮನೆಯಲ್ಲಿ ಕಂಬಕ್ಕೆ ಒರಗಿ ಕುಳಿತಿದ್ದಾರೆ. ಅವರ ಮುಖಭಾವವನ್ನು ನೋಡಿದರೆ, ಯಾವುದೋ ಆಲೋಚನಾ ಸುಳಿಯಲ್ಲಿ ಸಿಲುಕಿರುವಂತೆ ಕಂಡು ಬರುತ್ತಿದೆ. ಒಳಗಿನ ಕೋಣೆಯಿಂದ ಅಲ್ಲಿಗೆ ಬಂದ ಲಕ್ಷ್ಮಮ್ಮ ಮಾತಿಗೆ ಪ್ರಾರಂಭಿಸುತ್ತಾಳೆ.]

ಲಕ್ಷ್ಮಮ್ಮ : ಮಲೆಮಾದೇಶ್ವರನ ಹೆಸರಲ್ಲಿ ಹರಕೆ ಕಟ್ಕೊಂಡಿವ್ನಿ. ಬಾವೀಲಿ ನೀರ್ ಬಿದ್ರೆ, ತಪ್ಪದೆ ಮೂರು ಯಾತ್ರೆ ಮಾಡ್ತೀನಿ ಅಂತ.

ಗೌಡ : (ಇನ್ನೂ ಆಲೋಚನಾ ಸುಳಿಯಲ್ಲೇ ಸಿಲುಕಿದ್ದವರು ಈಗ ಎಚ್ಚತ್ತು....)
ಏನಂದೆ?

ಲಕ್ಷ್ಮಮ್ಮ : ಮಾದೇಶ್ವರಂಗೆ ಹರಕೆ ಕಟ್ಕೊಂಡಿವ್ನಿ ಅಂದೆ.

ಗೌಡ : ಯಾವ ಮಾದೇಶ್ವರನ್ನೂ ಕಾಣೆ? ಬೀರೇಶ್ವರನ್ನೂ ಕಾಣೆ.

ಲಕ್ಷ್ಮಮ್ಮ : ಇದೇನು ಹಿಂಗೆ ಅನ್ತೀರಲ್ಲ, ಬುಡ್ತು ಅನ್ನಿ.

ಗೌಡ : ಬುಡ್ತು ಅನ್ದೇ ಇದ್ರೆ, ಹಿಡ್ಕೊಳ್ಳಿ ಬುಡು. ಮಾದೇಶ್ವರ ಇನ್ನೇನ್ ಕೆಟ್ಟದ್ದು ಮಾಡಬಲ್ಲ. ಈಗಾಗಿರೋ ಅವಮಾನಕ್ಕಿಂತ, ಆ ನನ್ನಪ್ಪ ಸಾವನ್ನೇ ತಂದುಕೊಟ್ಟಿದ್ರೂ ನೆಮ್ಮದಿಯಿಂದ ಒಪ್ಕೊತಿದ್ದೆ.

ಲಕ್ಷ್ಮಮ್ಮ : ಸಾವಿರ ಸರ್ತಿ ಬುಡ್ತು ಅನ್ನಿ. ಕೆಟ್ಟ ಕೆಟ್ಟ ಮಾತನ್ನೇ ಆಡ್ತೀದ್ದೀರಲ್ಲ.

ಗೌಡ : ಆಡ್ದೇ ವಿಧಿ ಇಲ್ಲ ಕಣೇ. ಒಂದಕ್ಕೆ ಹತ್ತು ಅರ್ಥ ಕಟ್ಟಿ ಆಡೋ ಈ ಪ್ರಪಂಚದಾಗೆ ಹೆಂಗೆ ಬಾಳೋದು ಅನ್ನೋದೆ ಅರ್ಥವಾಗಲ್ತು.

ಲಕ್ಷ್ಮಮ್ಮ : ಹಂಗಾದ್ರೆ ನಿಮ್ಮ ಕಿವಿಗೂ ಬಿದ್ದಿರ್ಬೇಕು.

ಗೌಡ : ಬೀಳ್ದೆ ಇರೋಕೆ ನಾನೇನು ಸತ್ಹೋಗಿದ್ದೀನಾ. "ಸೊಸೇನಾ ಬಾವಿಗೆ ಬಲಿ ಕೊಟ್ಟು, ನೀರ್ ಬರ್ಸಿ ದೊಡ್ಡೋನು ಅನ್ನಿಸ್ಕೋಬೇಕಂತ ನಿಶ್ಚಯಿಸವ್ನೆ ಕಟುಕ'' ಅಂತ ಊರೆಲ್ಲಾ ಹಂಗಿಸ್ತಾಯ್ತೆ. ಅನ್ಲಿ ಬುಡು, ಬೀಸೋ ಗಾಳಿ ನಿಲ್ಲಿಸೋಕಾದೀತಾ? ಆಡೋ ಬಾಯಿ ಕಟ್ಟೋಕಾದೀತಾ?

ಲಕ್ಷ್ಮಮ್ಮ : [ಊರಿನವರ ಆಡಿಕೆಯ ಮಾತಿನಿಂದ ಭೀತಿಗೊಳಗಾಗಿರುವ ತನ್ನ ಮನದ ನೋವನ್ನು ಮತ್ತು ಅಭಿಪ್ರಾಯವನ್ನು ಮಂಡಿಸಲು ಇದೇ ತಕ್ಕ ಸಮಯವೆಂದು ಭಾವಿಸಿ]
ಈಗೊಂದು ವಿಚಾರ ಹೇಳ್ತೀನಿ ಕೇಳ್ತೀರ.

ಗೌಡ : ಅದೇನು ಹೇಳು?

ಲಕ್ಷ್ಮಮ್ಮ : ಹೆಣ್ ಹೆಂಗಸಿನ ಮಾತು ಅಂತ ಅಸಡ್ಡೆ ಮಾಡ್ಬೇಡಿ.

ಗೌಡ : ಇಲ್ಲಾ ಕಣ ಹೇಳು.

ಲಕ್ಷ್ಮಮ್ಮ : ನಮ್ಮ ತಾತ ಮುತ್ತಾತದೀರ್ ಕಾಲದಿಂದಲೂ ಬಾವಿ ತೋಡಿಸ್ದಾಗ, ಕೋಟೆ ಕೊತ್ತಲ ಕಟ್ಟಿಸ್ದಾಗ ಕುರೀನೊ ಕೋಣಾನೊ ಬಲಿ ಕೊಡ್ತಿರಲಿಲ್ವೆ.

ಗೌಡ : (ಹೂಗುಟ್ಟುತ್ತಾರೆ).

ಲಕ್ಷ್ಮಮ್ಮ : ಹಂಗೆ ಬಲಿ ತಕೊಂಡೇ ಅವು ನೂರ್ಕಾಲ ನಿಲ್ತಿದ್ದೊ ಅಂತ ನಾವು ನಂಬ್ಕೊಂಡಿಲ್ವೆ?

ಗೌಡ : ಹು...

ಲಕ್ಷ್ಮಮ್ಮ : ಇಂಥಾ ಊರೊಟ್ಟಿನ ಕೆಲ್ಸದಾಗ ಒಂದೊಂದ್ ಸತಿ ನರಮನ್ಸನ್ ಬಲಿಯೇ ಆಯ್ತಿತ್ತಂತೆ. ಅದರಲ್ಲೂ ಗರ್ಭಿಣಿ ಹೆಂಗ್ಸನ್ನೇ ಬಲಿ ತಕ್ಕೊಂಡು ಕೆಲವು ಉಳೀತಿದ್ದುವಂತೆ. ಇದೆಲ್ಲಾ ಹಿಂದ್ಲಿಂದ ನಡೆದು ಬಂದಿರೋದು ನಿಜ ಅಲ್ಲವೇ?

ಗೌಡ : [ಹೆಂಡತಿಯ ವಾದ ಸರಣಿಯನ್ನು ಕೇಳಿ, ಸ್ವಲ್ಪ ಬೇಸರಗೊಂಡು]

ಲಕ್ಷ್ಮಮ್ಮ : [ಹೂ ನಡುಗುವ ಕಂಠದಿಂದ]
ನನಗ್ಯಾಕೋ ಜೋಯಿಸಪ್ಪ ಹೇಳತ್ತಾವಿಂದ ಬಲಗಣ್ಣೇ ಅದುರ್ತ ಇದೆ. ನಿಮಗೆ ಅದ ನಾನು ಬಾಯ್‌ಬುಟ್ಟು ಹೇಳಿರ್ಲಿಲ್ಲ. ಈಗ ಅದರ ಜೊತೇಗೆ ಊರೋರ್ ಅನ್ನೊ ಮಾತು ಕೇಳ್ದಾಗ್ಲಿಂದ ಎದೆಯೇ ನಡಗ್ತಾ ಐತೆ. ಎರಡು ಜೀವದೋಳೂ ಭಾಗೀರತೀನ್ನ ಬಾವಿ ಹತ್ರಕ್ಕೆ ಕಳುಸುದ್ರೆ, ಮತ್ತೆ ಬಂದಾಳ ಮನೆಗೆ...

(ಎನ್ನುತ್ತಿದ್ದಂತೆ ಬಿಕ್ಕಿ ಬಿಕ್ಕಿ ಅಳಲಾರಂಭಿಸುತ್ತಾಳೆ....)

ಗೌಡ : (ತೀವ್ರವಾದ ಬೇಸರ ಮತ್ತು ಸ್ವಲ್ಪ ಕೋಪದಿಂದ)

ಭಾಗೀರತಿ ಕಂಡ್ರೆ ನಿಂಗಿರೋ ಪ್ರೀತಿ ನನಗಿಲ್ಲ ಅಂತ ತಿಳ್ಕೊಂಡಿದ್ದೀಯಾ?

ಲಕ್ಷ್ಮಮ್ಮ : [ಯಾವ ಉತ್ತರವನ್ನೂ ಕೊಡದೆ ಅಳುತ್ತಿರುತ್ತಾಳೆ]

ಗೌಡ : (ನಿರ್ಧಾರದ ಧ್ವನಿಯಲ್ಲಿ)
"ಭಾಗೀರತಿ ಕೈಯಲ್ಲಿ ಪೂಜೆ ಮಾಡ್ಸು" ಅಂತ ಅಯ್ನೋರು ಹೇಳವ್ರೆ. ಹಂಗೇ ಮಾಡಿಸ್ತೀನಿ. ಒಂದು ವೇಳೆ ಆ ನನ್ನವ್ವ ನಮ್ಮ ಭಾಗೀರತೀನ್ನ ಬಲಿ ತಕೊಂಡೇ ಬತ್ತೀನಿ ಅಂತ ನಿಶ್ಚಯಿಸಿಕೊಂಡಿದ್ರೆ, ಅದ ತಪ್ಪಿಸೋಕೆ ನನ್ನ ಕೈಲಿ, ನಿನ್ನ ಕೈಲಿ ಆದೀತ?

ಲಕ್ಷ್ಮಮ್ಮ : (ಬೆಚ್ಚಿ)
ಅಂದ್ರೆ, ನೀವು ಹೇಳೋ ಮಾತು!

ಗೌಡ : ನೋಡು ಲಕ್ಷ್ಮಿ, ಗಂಗವ್ವ ಬರ್ದೇ ಇದ್ರೆ ಮಲ್ಲನಗೌಡ್ನ ಮನತನ ಈ ಧರೆ ಮೇಲೆ ಇದ್ರೂ ಒಂದೆ; ನಾಶನ ಆದ್ರೂ ಒಂದೆ.
(ಆವೇಶ ಬಂದವನಂತಾಗಿ)
ಗಂಗವ್ವ ಬರ್ಲಿ; ಕಲ್ಲನ ಕೇರೀಲಿ ಹರೀಲಿ; ಅದರಾಗ ನನ್ನ ಮನೆಯೇ ಕೊಚ್ಕೋಗ್ಲಿ ನನಗೆ ಚಿಂತಿಲ್ಲ.

ಲಕ್ಷ್ಮಮ್ಮ : (ಗದ್ಗದ ಕಂಠದಿಂದ ತಡವರಿಸುತ್ತಾ)
ನಮ್ಮ ಚಿನ್ನದಂಥಾ ಹೆಣ್ ಮಗಳು ಬಲಿಯಾದ್ರೂ ಚಿಂತಿಲ್ಲ ಅಂತೀರಾ?

ಗೌಡ : (ಲಕ್ಷ್ಮಮ್ಮ ಬಿಕ್ಕಳಿಸುತ್ತಿರುವುದನ್ನು ದಿಟ್ಟಿಸಿ ನೋಡಿ, ದೊಡ್ಡದಾಗಿ ನಿಟ್ಟಿಸಿರು ಬಿಟ್ಟು ಮಾತನಾಡತೊಡಗುತ್ತಾರೆ)
ಲಕ್ಷ್ಮಿ, ಅಯ್ನೋರು ಆಗಾಗ ಹೇಳ್ತಿರ್ತಾರೆ ಒಂದ್ ಮಾತ. ಮಾಭಾರತದಲ್ಲಿ ಹೇಳಯ್ತಂತೆ. "ಒಂದು ಮನೆ ಹಿತಕ್ಕಾಗಿ ಒಬ್ಬ ವ್ಯಕ್ತಿ ಬಲಿ ಕೊಡ್ಬೇಕು; ಒಂದೂರಿನ ಹಿತಕ್ಕಾಗಿ ಒಂದು ಮನೇನೆ ಬಲಿ ಕೊಡ್ಬೇಕು; ಒಂದು ನಾಡಿನ ಹಿತಕ್ಕಾಗಿ ಒಂದೂರನ್ನೇ ಬಲಿ ಕೊಡ್ಬೇಕು" ಅಂತ.

ಲಕ್ಷ್ಮಮ್ಮ : (ಕೋಪ ಬೆರತ ಅಳು ಧ್ವನಿಯಿಂದ)

ನಿಮ್ಮ ಅಯ್ನೋರ ಉಪದೇಶಕ್ಕಷ್ಟು ಬೆಂಕಿ ಹಾಕ. ನಮ್ಮ ಮನೇಗೆ ಬೆಂಕಿ ಎಟ್ಕೊಂಡು ಊರ್ಗೆಲ್ಲಾ ಬೆಳಕು ಮಾಡು ಅಂತ ಹೇಳವ್ರಾ.

ಗೌಡ : (ಕೋಪದಿಂದ ಕೆಂಗಣ್ಣು ಬಿಡುತ್ತಾ)
ಹದ್ದು ಮೀರಿ ಮಾತಾಡ್ತ ಇದ್ದೀಯೆ ಲಕ್ಷ್ಮೀ, ದೊಡ್ಡೋರ ಮಾತ ಅಣಕಿಸ್ಬೇಡ.

ಲಕ್ಷ್ಮಮ್ಮ : [ಗೌಡರ ಕೋಪದ ಮುಂದೆ ತತ್ತರಿಸಿದ ಲಕ್ಷ್ಮಮ್ಮ, ತನ್ನ ನೋವನ್ನು ತಾನೇ ನುಂಗಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗುತ್ತಾಳೆ.]

ಗೌಡ : [ಲಕ್ಷ್ಮಮ್ಮನು ಸಂಕಟದಿಂದ ಬಿಕ್ಕುತ್ತಿರುವ ಧ್ವನಿಯು ಗೌಡರ ಎದೆಯನ್ನು ಶೂಲದಂತೆ ಇರಿಯುತ್ತದೆ. ಅವಳತ್ತ ನೋಡುತ್ತಾ)....
ಲಕ್ಷ್ಮೀ.....ಲಕ್ಷ್ಮೀ.....ಸಮಾಧಾನ ತಂದ್ಕೊ.

ಲಕ್ಷ್ಮಮ್ಮ : ನಂದೊಂದು ಮಾತ ನಡೆಸಿಕೊಡ್ತೀರಾ ?

ಗೌಡ : ಅದೇನ್ ಕೇಳು.

ಲಕ್ಷ್ಮಮ್ಮ : [ಅತ್ಯಂತ ದೀನಳಾಗಿ ಕೈ ಮುಗಿಯುತ್ತಾ)
ನಿಮ್ಮ ದಮ್ಮಯ್ಯ ಅಂತೀನಿ. ದಂಡಿನಲ್ಲೀರು ಮಾದೇವಂಗೆ ಒಂದು ಮಾತು ತಿಳ್ಸಿ, ಅವನು ಬಂದ ಮೇಲೆ ಗಂಗೆ ಪೂಜೆ ಮಾಡ್ಸಿ.

ಗೌಡ : ಅಯ್ಯೋ ಲಕ್ಷ್ಮಿ, ನಿಂಗೇನಾರ ಹುಚ್ಚು ಹಿಡ್ಕೊತೇನೆ! ಏನಾಗ್ಬೈತೆ ಅಂತ ಅವನ್ನ ಕರಸ್ಕೊಬೇಕೆ? ಅಯ್ನೋರು ಹೇಳದ್ದನ್ನ ಅಪಾರ್ಥ ಕಟ್ಟಿ ಊರೆಲ್ಲಾ ಇಷ್ಟು ದೊಡ್ಡದು ಮಾಡ್ಕೊಂಡು ಕುಣಿತಾದೆ ಅಂತ, ನಾವೂ ಕುಣಿಬೇಕೇನೆ ಸುಮ್ಕಿರು, ಭಾಗೀರತಿಗೇನೂ ಆಗೊಲ್ಲ. ಗಂಗವ್ವ ಅಂಥಾ ಕಠಿಣ ಮನ್ಸೆ ಅಲ್ಲ.

ಲಕ್ಷ್ಮಮ್ಮ : [ಗಂಡನ ಮುಂದೆ ಮಾತು ಮುಂದುವರಿಸಲಾರದೆ ಸೋತು ಸುಮ್ಮನಾಗಿ ತನ್ನಲ್ಲಿಯೇ ದುಃಖಿಸುತ್ತಾ]
ಏನೋ ಎಲ್ಲಾ ಮಾದಪ್ಪನ ದಯೆ. ಗಂಗವ್ವ... ನಿನ್ನ ಮಡಲಾಗೆ ನನ್ನ ಮಗೀನ ಹಾಕಿದ್ದೀನಿ ಕನವ್ವ. ಅವ್ಳ ಕಾಪಾಡೋ ಭಾರ ನಿನ್ನದು.
(ಅಳುತ್ತಾ ಒಳ ಕೋಣೆಯತ್ತ ಹೋಗುತ್ತಾಳೆ)

ಗೌಡ : ಭಾಗೀರತಿ ತೌರಿಗ್ಹೋದೋಳು ಬಂದ್ಳಾ ?

(ಬಾಗಿಲ ಮರೆಯಲ್ಲಿ ನಿಂತಿದ್ದ ಮಲ್ಲವ್ವ, ಒಳಗಿನಿಂದಲೇ ಉತ್ತರ ನೀಡುತ್ತಾಳೆ.)

ಮಲ್ಲವ್ವ : ಇನ್ನೂ ಬರ್ಲಿಲ್ಲ ಮಾವಯ್ಯ. ಇಳ್ಹೊತ್ತು ಮಾಡ್ಕೊಂಡು ಬರಬೋದು.

ಗೌಡ : ನಾಳೆ ಗಂಗೆ ಪೂಜೆಗೆ ಅಣಿ ಮಾಡ್ಕೊಳಿ. ಹೊತ್ತು ಮೂಡು ಸಮಯಕ್ಕೆ ಸರಿಯಾಗಿ ಬಾವಿ ಹತ್ರ ಇರ್ಬೇಕು ಅಂತ ಜೋಯಿಸಪ್ಪನೋರು ಹೇಳವ್ರೆ. ಈಗ ನಾನೊಸಿ ಅವರ ಮನೇತಕೆ ಹೋಗ್ಬತ್ತೀನಿ.

(ಗೌಡರು ತೆರಳುತ್ತಾರೆ.)

ಅಂಕ - ಮೂರು

ದೃಶ್ಯ-1

[ನದಿಯ ತೀರವೊಂದರ ಬಳಿ ದಂಡು ಬೀಡುಬಿಟ್ಟಿದೆ. ಸರೊತ್ತಿನ ಸಮಯ ಮೀರಿದೆ. ಬಿಚ್ಚುಗತ್ತಿ ಹಿಡಿದು ಪಹರೆ ಕಾಯುತ್ತಿದ್ದ ಸೈನಿಕರಲ್ಲಿ ಕೆಲವರು ಈಗ ನಿದ್ರಾದೇವಿಯ ಸೆಳೆತಕ್ಕೆ ಒಳಗಾಗುತ್ತಿದ್ದಾರೆ. ಮರಗಳಿಗೆ ಸಿಕ್ಕಿಸಿದ್ದ ಪಂಜುಗಳು ಒಂದೆರಡು ಕಡೆ ಉರಿಯುತ್ತಿದ್ದು, ಈಗ ನಂದುವ ಸ್ಥಿತಿಯಲ್ಲಿವೆ. ಡೇರೆಯೊಂದರಲ್ಲಿ ಮಾದೇವರಾಯ ತನ್ನ ಗೆಳೆಯನೊಬ್ಬನೊಡನೆ ಮಲಗಿ ನಿದ್ರಿಸುತ್ತಿದ್ದವನು. ಇದ್ದಕ್ಕಿದ್ದಂತೆ "ಅಯ್ಯೋ!.... ಹಾ! ಅಯ್ಯಯ್ಯೋ... ಅಯ್ಯೋ!'' ಎಂದು ಕನವರಿಸುತ್ತಾ ಎಚ್ಚರಗೊಳ್ಳುತ್ತಾನೆ. ಕತ್ತಲ ಗರ್ಭದಲ್ಲಿ ಅರೆಗಳಿಗೆ ಹಾಗೆಯೇ ಮಲಗಿದ್ದವನು ಈಗ ಮೇಲೆದ್ದು ಕಡ್ಡಿ ಗೀರಿ ದೀಪ ಹತ್ತಿಸುತ್ತಾನೆ. ಹೆದರಿಕೆ ಮತ್ತು ಉದ್ವೇಗಗಳಿಂದ ಮಯ್ಯೆಲ್ಲಾ ಕಂಪಿಸುತ್ತಿದೆ. ಏದುಸಿರು ಬಿಡುತ್ತಾ, ತನಗೆ ತಾನೇ ಸಮಾಧಾನ ತಂದುಕೊಳ್ಳಲು ಯತ್ನಿಸುತ್ತಿದ್ದಾನೆ. ಇವನ ಪಕ್ಕದಲ್ಲಿಯೇ ಮಲಗಿದ್ದ ಗೆಳೆಯ ದೇವಯ್ಯನು ಡೇರೆಯಲ್ಲಿ ದೀಪದ ಬೆಳಕು ಆವರಿಸಿದ್ದರಿಂದ ಎಚ್ಚರಗೊಂಡು.]

ದೇವಯ್ಯ : ಇದ್ಯಾಕೆ ದೀಪ ಉರೀತಾದಲ್ಲ?

ಮಾದೇವ : ನಾನೇ ಹಚ್ಚಿದೆ.

ದೇವಯ್ಯ : ಇದೇನ್ ಮಾದೇವ! ಹಿಂಗೆ ಕುಂತಿದ್ದೀಯೆ! ಏಕೆ ನಿದ್ದೆ ಹತ್ತಲಿಲ್ವ?

ಮಾದೇವ : ಹಂಗೇನಿಲ್ಲ ನಿದ್ದೆ ಚೆನ್ನಾಗೆ ಬಂದಿತ್ತು. ಆದ್ರೆ...

ದೇವಯ್ಯ : (ಸರಿಯಾಗಿ ಎದ್ದು ಕುಳಿತುಕೊಂಡು, ಮಾದೇವರಾಯನನ್ನು ದೀಪದ ಬೆಳಕಿನಲ್ಲಿ ದಿಟ್ಟಿಸಿ ನೋಡಿ....)

ಏನ್ ಮಾದೇವ? ಪೂರ್ತಾ ಬೆವತೇ ಹೋಗಿದ್ದೀಯೇ!. ಏನಾಯ್ತು? ಏನಾದ್ರೂ ಕೆಟ್ಟ ಕನಸು ಕಂಡ?

ಮಾದೇವ : ಹೂ.

ದೇವಯ್ಯ : ಅದಕ್ಕೆಲ್ಲಾ ಹೆದರ್ತಾರೇನಯ್ಯ?

ಮಾದೇವ : ಹಂಗಲ್ಲ ದೇವಯ್ಯ. ಆ ಕನಸು ಯಾಕೋ ನನ್ನ ಮನಸ್ಸನ್ನೇ ಹಿಂಡಿದಂಗಾಯ್ತು.

ಅದ್ಕೆ ಎದ್ದು ಕುಂತೆ.

ದೇವಯ್ಯ : ಏನ್ ಕಂಡೆ ಕನಸ್ನಲ್ಲಿ? ಅದನಾದ್ರೂ ಹೇಳು. ಹೇಳ್ಕೊಂಡ್ರೆ ಮನಸ್ಗೆ ಸ್ವಲ್ಪ ನೆಮ್ಮದಿ ಸಿಗುತ್ತಂತೆ.

ಮಾದೇವ : ನಮ್ಮ ಊರಿನಲ್ಲಿ ದೊಡ್ಡ ಉತ್ಸವ ನಡೀತಿತ್ತು. ಪಟಲದವ್ವಂದೇ ಇರ್ಬೇಕು. ನೂರಾರ್ ಮಂದಿ ಹೆಂಗಸರು ತೆಂಬಿಟ್ಟಿನ ಆರತಿ ತಕ್ಕೊಂಡು ಭೋ ಸಂತೋಷದಿಂದ ದೇವರ ಮುಂದೆ ನಡೀತಿದ್ರು. ಪಡ್ಡೆಗೆ ಬಂದ ಹೈಕ್ಳು ಕತ್ತಿವರ್ಸೆ, ದೊಣ್ಣೆವರ್ಸೆ ಮಾಡ್ತಾ, ಕುಣ್ಕೊಂಡ್ ನೆಕ್ಕೊಂಡ್ ಬರ್ತಿದ್ರು. ನಮ್ಮ ಮನೇತಕೆ ದೇವರು ಬತ್ತಿದ್ದಂಗೆ, ನಮ್ಮವ್ವ ಮಂಗಳಾರತಿ ತಟ್ಟೆ ತಕೊಂಡ್ಹೋಗಿ ಪೂಜೆ ಮಾಡ್ಸಿ, ಅಲ್ಲಿದ್ದ ನಮ್ಮ ಮನೆಯೋರ್ಗೆಲ್ಲಾ ಆರತಿ ಕೊಡ್ತಾಯಿದ್ದಳು. ಆರತಿ ತಕೋಕೆ ಅಂತ ನನ್ನ ಹೆಂಡ್ತಿ ಭಾಗೀರತಿ ಕೈ ಒಡ್ಡಾಗ, ತಟ್ಟೇಲಿ ಕರ್ಪೂರದ ಉರಿ ಇದ್ದಕ್ಕಿದ್ದಂಗೆ 'ಭಗ್' ಅಂತ ಹೆಚ್ಚಾಗಿ, ಅವಳ ಸೆರಗೇ ಹತ್ಕೋತು. ಉರೀತಿದ್ದ ಸೆರಗನ್ನೇ ಹಿಡ್ಕೊಂಡು ಭಾಗೀರತಿ ಮನೆ ಒಳಾಕೆ ಓಡ್ಹೋದಳು. ಅವಳು ಒಳಾಕೆ ಹೊಯ್ತಿದ್ದಂಗೆ ನಮ್ಮನೆಯೇ "ಧಗಧಗ ಧಗಧಗಾ" ಅಂತ ಹತ್ಕೊಂಡು ಬುಡ್ತು. ಮುಗಿಲು ಮುಟ್ಟುವಂಗೆ ಬೆಂಕಿ ಉರೀತಾ ಉರೀತಾ, ಅರಗಳ್ಗೇಲಿ ಮನೆ ಮಾಡೆಲ್ಲಾ ಸುಟ್ಟು ಕರಕ್ಲಾಯ್ತು. ಅಲ್ಲಿದ್ದ ಜನವೆಲ್ಲಾ 'ಅಯ್ಯೋ.... ಅಯ್ಯಯ್ಯೋ' ಅಂತ ಅರಚ್ತಾ ಇದ್ರು. ಅಷ್ಟೊತ್ತಿಗೆ ನಾ ಕಣ್ಣು ಬುಟ್ಬುಟ್ಟೆ.

[ಅವ್ಯಕ್ತವಾದ ಯಾತನೆಯಿಂದ ನೊಂದವನಂತೆ ಮತ್ತೊಮ್ಮೆ ನಿಟ್ಟುಸಿರು ಬಿಡುತ್ತಾನೆ ಮಾದೇವರಾಯ.]

ದೇವಯ್ಯ : (ಅಚ್ಚರಿಯಿಂದ ಕಣ್ಣುಗಳನ್ನು ಅರಳಿಸುತ್ತ....)
ಅಬ್ಬಬ್ಬಾ! ಭೋ ವಿಚಿತ್ರವಾಗಯ್ತೆ ಕಣಯ್ಯಾ ಕನಸು.

ಮಾದೇವ : (ಕುಗ್ಗಿದ ಧ್ವನಿಯಿಂದ.)

ದೇವಯ್ಯ, ಮನೆ ಕಡೆ ಏನೋ ಅನಾಹುತ ಆಗಿರ್ಲೇಬೇಕು ಅನ್ನಿಸ್ತೈತೆ. ಆ ಕನಸ ಕಂಡೇ ತಾವಿಂದ ಹೊಟ್ಟೇಲಿ ಬೆಂಕಿ ಹಾಕ್ದಂಗೆ ಉರೀತಾದೆ.

ದೇವಯ್ಯ : ಇದ್ಕೆಲ್ಲಾ ಏನೂ ಯೋಚ್ನೆ ಮಾಡ್ಬೇಡ ಸುಮ್ನಿರಯ್ಯ.

ಮಾದೇವ : ನಂಗೊಂದ್ ಯೋಚ್ನೆ. ಈಗ ಹೆಂಗಿದ್ರೂ ದಂಡು ಪಟ್ಟಣದ ಕಡೆಗೆ ಹಿಂತಿರುಗ್ತಾಯಿದೆ. ನಡೀಬೇಕಾಗಿದ್ದ ಕದನ ನಿಂತು ಹೋಗಿ ಒಪ್ಪಂದವೇ ಆಯ್ತಲ್ಲ. ಈಗೇನಿದ್ರೂ ಪಟ್ಟಣದಲ್ಲಿರೂ ದೊಡ್ಡ ದಳಪತಿಗೆ ಹೇಳಿ, ನಂನಮ್ಮ ಊರ್ಗೆ ಹೋಗ್ಬೇಕಾಗಿತ್ತು. ದಂಡು ಸೇರೋಕೆ ಏನಿಲ್ಲಾ ಅಂದ್ರು ಇನ್ನೂ ಮೂರ್‍ನಾಕು ದಿವ್ಸ ಬೇಕಾಗ್ತೈತೆ. ನೀನ್ಯಾರ್ಗೂ ಹೇಳ್ಬೇಡ. ಇತ್ತಲಿಂದಲೇ ನಾನು ಆದಷ್ಟು ಬೇಗ ಊರಿಗ್ಹೋಗಿದ್ದು, ದಂಡು ಪಟ್ಟಣ ಸೇರೋ ಹೊತ್ಗೆ, ನಾನು ಬಂದು ಸೇರ್ಕೊಂತಿನಿ.

ದೇವಯ್ಯ : ಅಷ್ಟೊಂದು ಆತ್ರ ಯಾಕಯ್ಯ? ಕನಸಲ್ಲಿ ಕಂಡಿದ್ದೆಲ್ಲಾ ನಿಜವಾಗೂದಿದ್ರೆ ಇಷ್ಟೊತ್ತಿಗೆ ಪ್ರಪಂಚಾನೇ ಉಳೀತಿರಲಿಲ್ಲ.

ಮಾದೇವ : ಇಲ್ಲ ದೇವಯ್ಯ, ನನ್ನ ತಡೀಬೇಡ. ಸ್ವಲ್ಪ ಸಹಾಯ ಮಾಡು. ನಾ ಆದಷ್ಟು ಬೇಗ ಬಂದು ಬುಡ್ತೀನಿ.

ದೇವಯ್ಯ : ಏನ್ ಮಾದೇವ ಎಳೇ ಮಗೀನಂಗೆ ಆಡ್ತಾ ಇದ್ದೀಯಲ್ಲ! ಏನು ಕೆಟ್ಟದ್ದಾಗಲ್ಲ. ಧೈರ್ಯವಾಗಿರು.
(ಈತ ಮಾತಾಡುತ್ತಿದ್ದಂತೆಯೇ ಮಾದೇವ ಹೊರಕ್ಕೆ ಕಾಲಿಡುತ್ತಾನೆ.)
ಇದೇನ್ ಮಾದೇವ ಇಂಥಾ ಕತ್ತಲಲ್ಲೇ ಹೊಂಟು ಬುಟ್ಟಲ್ಲಾ!

ಮಾದೇವ : ಅಯ್ಯೊ ಬುಡಣ್ಣ ಈ ಕತ್ತಲೆ ಏನ್ ಮಾಡೀತು ನನ್ನ... ಬೇಗ ಹೋಗ್ಬತ್ತೀನಿ.
(ಕತ್ತಲಲ್ಲಿ ಮರೆಯಾಗುತ್ತಾನೆ.)

ದೇವಯ್ಯ : ಮಾದೇವ ಹಾಲಿನಂತಹ ಮನಸ್ಸಿನೋನು. ದೇವರೇ, ಅವನ್ಗೇನು ಕೇಡು ಆಗದೇ ಇರ್‍ಲಿ.
(ಎಂದು ಕೇಳಿಕೊಳ್ಳುತ್ತಾ ದೀಪ ತುಂಬಿ ಮಲಗುತ್ತಾನೆ.)

ದೃಶ್ಯ-2

[ಪಾರ್ವತಿಯ ಮನೆಯ ಹೊರಬಾಗಿಲ ಬಳಿ ಕುದುರೆಯೊಂದು ನಿಲ್ಲುತ್ತದೆ. ಅದರ ಮೇಲಿಂದ ಮಾದೇವರಾಯ ದುಮ್ಮಿಕ್ಕಿದವನೆ ಆತುರಾತುರವಾಗಿ ಮನೆಯೊಳಕ್ಕೆ ಧಾವಿಸಿ ಬರುತ್ತಾನೆ.]

ಮಾದೇವರಾಯ: ಪಾರ್ವತಿ... ಪಾರ್ವತೀ.... ಪಾರ್ವತೀ....

ಪಾರ್ವತಿ : ಯಾರು? ಓಹ್! ಮಾದೇವಣ್ಣ.

ಮಾದೇವ : ಪಾರ್ವತಿ, ನನ್ನ ಭಾಗೀರತಿ ಎಲ್ಲವ್ವೆ?

ಪಾರ್ವತಿ : [ಕೂಡಲೇ ಏನನ್ನೂ ಹೇಳಲು ತೋಚದೆ, ತಲೆ ತಗ್ಗಿಸುತ್ತಾಳೆ. ಮತ್ತೆ ಸ್ವಲ್ಪ ಧೈರ್ಯ ತಂದುಕೊಂಡು]

ಬಾಣ್ಣ, ಕುಂತ್ಕೊ ಬಾ.

ಮಾದೇವ : ಪಾರ್ವತಿ, ಬಂದೇ ಹೊತ್ನಿಂದ ಯಾರನ್ನ ಕೇಳುದ್ರೂ, ಹಿಂಗೆ ಅಡ್ಡ ಮಾತ್ನಲ್ಲೇ ಉತ್ತರ ಕೊಡ್ತಾವ್ರೆ. ನೀನಾದ್ರೂ ನೆಟ್ಟಗೆ ಹೇಳ್ತಿಯೋ... ಇಲ್ವೋ? ಹೇಳು, ನನ್ನ ಭಾಗೀರತಿ ಎಲ್ಲವ್ವೆ?

ಪಾರ್ವತಿ : [ಆತನ ಉದ್ವೇಗವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡುವ ಉದ್ದೇಶದಿಂದ]

ಈಗ ಎಲ್ಲಿಂದ ಬಂದಣ್ಣ?

ಮಾದೇವ : ನಮ್ಮೂರಿಂದ ಬಂದೆ.

ಪಾರ್ವತಿ : ನಿಮ್ಮವ್ವ ಮನೇಲಿ ಇರಲಿಲ್ವೆ?

ಮಾದೇವ : ನಮ್ಮವ್ವಂಗೆ ತಲೆಸೂಲೆ ಬಂದು, ಬಾಯೇ ಬುಡನಾರಳು. ಒಂದೇ ಸಮ್ನೆ ನರಳ್ತಾ ಬಿದ್ದವ್ಳೆ.

ಪಾರ್ವತಿ : ಇಲ್ಲಿಗ್ಹೆಂಗೆ ಬಂದಣ್ಣ?

ಮಾದೇವ : ನಮ್ ಅತ್ತಗಮ್ಮ ಹೇಳುದ್ಲು "ತೌರ್ಗೆ ಹೋದೋಳು ಭಾಗೀರತಿ ಬರ್ಲೇ ಇಲ್ಲ'' ಅಂತ. ಅದ್ಕೆ ಇಲ್ಲಿಗೆ ಬಂದ್ರೆ ಮನೇಲಿ ಹಾಳಾದೋರ್ಗೆ ಒಬ್ರಿಗಾದ್ರೂ ಬಾಯೇ ಇಲ್ವೇನೋ?

ಗರ ಬಡ್ಡೋರಂಗೆ ನಿಂತವ್ರೆ. “ಭಾಗೀರಥವ್ವನ ಇಚಾರ ಪಾರ್ವತವ್ವಂಗೆ ಗೊತ್ತು ಕನ್ರಪ್ಪಾ’’ ಅಂತ ಅಲ್ಲಿದ್ದ ನಮ್ಮೂರ ಮಾದಿ ಹೇಳುದ್ಲು. ಹಿಂಗ್ಯಾಕೆ ಎಲ್ರೂ ನನ್ನ ಜೀವಂತವಾಗಿ ಸಾಯಿಸ್ತೀದ್ದೀರಿ. ಹೇಳು ಪಾರ್ವತಿ? ನನ್ನ ಭಾಗೀರತಿ ಎಲ್ಲವ್ಳೆ?

ಪಾರ್ವತಿ : ಅಣ್ಣ, ಸ್ವಲ್ಪ ಸಮಾಧಾನ ತಂದ್ಕೊಳಣ್ಣ.

ಮಾದೇವ : ಅಂದ್ರೆ, ನಿನ್ನ ಮಾತಿನ ಅರ್ಥ!

ಪಾರ್ವತಿ : (ಉದ್ವಿಗ್ನಳಾಗಿ)
ಭಾಗೀರತಿ ಗಂಗವ್ವನ ಪಾದ ಸೇರ್ಕೊಂಡ್ಲು. ಕಲ್ಲನಕೇರೀಲಿ ನಿಮ್ಮಪ್ಪ ತೋಡಿಸ್ದ ಬಾವಿಗೆ ಬಲಿಯಾದ್ಲು. ಮನೆತನದ ಮಾನ ಉಳ್ಸೋಕೆ, ಬದುಕಿರೋರ ಜೀವ ಉಳ್ಸೋಕೆ ತನ್ನ ಜೀವ ಕೊಟ್ಲು.

ಮಾದೇವ : [ನಿಂತಲ್ಲಿಯೇ ಕುಕ್ಕರಿಸಿ ಕುಸಿಯುತ್ತಾನೆ. ನೆಟ್ಟನೆಯ ದಿಟ್ಟಿಯಿಂದ ಪಾರ್ವತಿಯನ್ನೇ ನೋಡುತ್ತಿರುತ್ತಾನೆ.]

ಪಾರ್ವತಿ : ಅಣ್ಣ, ಎದೆ ಗಟ್ಟಿ ಮಾಡ್ಕೊ. ಭಾಗೀರತಿಯಂತಾ ಹೆಣ್ ಪಡೀಬೇಕಾದ್ರೆ ಪುಣ್ಯ ಮಾಡಿರ್ಬೇಕು. ಅವಳು ಯಾವುದೋ ದೇವತೆ ಇರ್ಬೇಕು. ಅದ್ಕೆ ಅಷ್ಟು ಬೇಗ ಮನುಸ್ರು ಜನ್ಮ ತೊರ್ದು ಹೊಂಟೋದ್ಲು...

[ಮಾದೇವ ಮಾತಾಡುವ ಶಕ್ತಿಯನ್ನೇ ಕಳೆದುಕೊಂಡಂತೆ ಕುಳಿತಿದ್ದಾನೆ. ಕಣ್ಣಲ್ಲಿ ತುಸುವಾದರೂ ನೀರಿಲ್ಲ. ಪಾರ್ವತಿಯನ್ನೇ ದುರುಗುಟ್ಟುಕೊಂಡು ನೋಡುತ್ತಿದ್ದಾನೆ.]

ಪಾರ್ವತಿ : [ಮಾದೇವರಾಯನ ಸ್ಥಿತಿಯನ್ನು ಕಂಡು ಪಾರ್ವತಿಯು ಕಂಗಾಲಾಗಿ ನಡುಗತೊಡಗುತ್ತಾಳೆ. ಆಕೆಯ ಕೊರಳು ಸಂಕಟದಿಂದ ತುಂಬಿಬರುತ್ತದೆ.]

ನಿಂಗೆ ಕೈಮುಗ್ದು ಕೇಳ್ಕೊತೀನಿ ಕನಣ್ಣಾ. ಹಿಂಗೆ ಬೆಪ್ಪು ಹಿಡ್ದಂಗೆ ಕುಂತ್ಕೊಬ್ಯಾಡ. ಒಸಿ ಧೈರ್ಯ ತಂದ್ಕೊ. ಸತ್ತೋರ್ಗಾಗಿ ಹಂಬಲ್ಸುದ್ರೆ ಅವರು ನಮ್ಮ ಹತ್ರಕ್ಕೆ ಮತ್ತೆ ಎದ್ದು ಬಂದರಾ? ಏನಿದ್ರೂ ಕಾಲ ತುಂಬಿದ ಮೇಲೆ ನಾವೇ ಅವರ ಹತ್ರಕ್ಕೆ ಹೋಗ್ಬೇಕು.

[ಮಾದೇವ ದಡಕ್ಕನೆ ಮೇಲೇಳುತ್ತಾನೆ. ಎದ್ದವನೇ ಅತಿ ವೇಗದಿಂದ ಬಾಗಿಲ ಕಡೆಗೆ ಧಾವಿಸುತ್ತಾನೆ.]

ಪಾರ್ವತಿ : ಅಣ್ಣಾ... ಅಣ್ಣಾ... ನಿಂತ್ಕೊಳಣ್ಣ...
(ಅಳುತ್ತಾ ಬಾಗಿಲ ಬಳಿಗೆ ಬರುತ್ತಾಳೆ.)

ಮಾದೇವ : (ಕುದುರೆಯ ಬಳಿಗೆ ಹೋಗಿ, ಅದರ ಮೇಲೆ ಏರಿ ಕುಳಿತುಕೊಳ್ಳುತ್ತಿದ್ದಂತೆಯೇ....)
ನಾ ಬತ್ತೀನೀ....
(ಎಂದು ದೊಡ್ಡದನಿಯಲ್ಲಿ ಕೂಗಿ ಹೇಳುತ್ತಾ ಕುದುರೆಯನ್ನು ದೌಡಾಯಿಸಿಕೊಂಡು ಮರೆಯಾಗುತ್ತಾನೆ.)

ದೃಶ್ಯ - 3

[ಮಲ್ಲನಗೌಡರು ತೋಡಿಸಿದ ಬಾವಿಯ ಹತ್ತಿರ ಕುಳಿತುಕೊಂಡು ಅದೇ ಊರಿನವರಿಬ್ಬರು ಮಾತನಾಡುತ್ತಿದ್ದಾರೆ.]

ತಿಮ್ಮ : ನೋಡ್ದ ಕರಿಯಣ್ಣ, ಎಂತ ಅನಾಹುತ ಆಗ್ಹೋಯ್ತು!

ಕರಿಯ : ನಮ್ ಹಗೆಗಳ್ಗೂ ಹಿಂಗಾಗಬಾರ್ದು ಕಣಪ್ಪ. ಆಡಾಡ್ತ ಎರಡು ಬಲಿ ತೆಕ್ಕೊಂಡುಬುಡ್ತಲ್ಲ.

ತಿಮ್ಮ : ಪಾಪ, ಗೌಡ್ರ ಗ್ರಾಚಾರ ಎಂತಾದ್ದಣ್ಣ. ಊರ್ಗೆ ಒಳ್ಳೇದ್ ಮಾಡೋಕ್ಹೋಗಿ ಸೊಸೇನ ಕಳ್ಕೊಂಡ. ಅವಳು ಸತ್ತಳಲ್ಲ ಅಂತ ಮಗ ಮಾದೇವಪ್ಪ ಪ್ರಾಣ ಕಳ್ಕೊಂಡ. ಅಯ್ಯೋ, ಎಂತಾ ಅನ್ಯಾಯ ಆಗ್ಹೋಯ್ತು.

ಕರಿಯ : ಮಾದೇವಪ್ಪ ಬೋ ತಿಳುವಳಕಸ್ಥ. ಅಂತಾದ್ದರಲ್ಲಿ ಏನಯ್ಯಾ ಇಂಥಾ ಕೆಲ್ಸ ಮಾಡ್ಕೊಂಡ. ಇನ್ನೂ ಚಿಕ್ಕ ವಯಸ್ಸು. ಇನ್ನೊಂದು ಮದ್ವೆ ಮಾಡ್ಕೊಂಡು ಹಾಯಾಗಿರೋದ್ ಬುಟ್ಟು, ಹಿಂಗೆಸತ್ತನಲ್ಲ.

ತಿಮ್ಮ : ನಾನು ಅವನ್ನ ಚಿಕ್ಕಂದಿನಿಂದ್ಲೂ ಬಲ್ಲೆ ಕಣಣ್ಣಾ. ಮಗೂನಂತಾ ಮನ್ಸು ಅವನ್ದು. ನಿಂಗೊತ್ತಿಲ್ಲ ಅಂತ ಕಾಣ್ತದೆ. ಹೊದ್ನೆ ವರ್ಷ ಇದೇ ಇಂತಾ ಸಂಕ್ರಾತೀಲಿ, ಹಿಂದಲಗೇರಿಯಲ್ಲಿ ಚಿಕ್ಕೋಳ್ ಗುಡ್ಲುಗೆ ಬೆಂಕಿ ಬಿದ್ದು ತೆಂಗಿನ ಮರದುದ್ದಕ್ಕೆ ಉರಿ ಹೊಡೀತಿತ್ತು. ಹಿಂದೆ ಮುಂದೆ ನೋಡ್ದೆ, ಅನಾಮತ್ ಒಳಾಕ್ ನುಗ್ಗುದ್ದೆ, ಬೆಂಕೀಲಿ ಸಿಗ್ಹಾಕೊಂಡಿದ್ದ ಮಗ ಬಾಣ್ತೀನ ಕಾಪಾಡ್ದ ಕಣಣ್ಣ. ಆಗ ಅವನ ಮೈಕೈಯೆಲ್ಲಾ ಬೆಂದ್ಹೋಗಿತ್ತು. ಕಂಡೋರ್ಗೆ ಕಷ್ಟ ಬಂದ್ರೆ, ತನ್ನದೇ ಅನ್ನುವಂಗೆ ಆಡ್ತಿದ್ದ.

ಕರಿಯ : ಹೂ ಕಣಪ್ಪ, ನಾನು ಕೇಳಿವ್ನಿ. ಯಾರ ಬಾಯ್ಲಿ ನೋಡುದ್ರು “ಅಪ್ಪನಿಗಿಂತ ಒಂದು ಕೈ ಮೇಲಾಗಿದ್ದ ಉಪ್ಕಾರ ಮಾಡೋದ್ರಲ್ಲಿ'' ಅಂತಾರೆ.

ತಿಮ್ಮ : ಬುಡಣ್ಣ, ಹಾಳಾದ್ ಈ ಪ್ರಪಂಚದಾಗೆ ಉತ್ತುಮರ್ಗೆ ಕಾಲಾನೇ ಇಲ್ಲ.

ಕರಿಯ : (ಅರೆಗಳಿಗೆ ಸುಮ್ಮನಿದ್ದು ಅನಂತರ....)

ಭಾಗೀರತವ್ವ ಬಾವಿಗೆ ಬಲಿಯಾದದ್ದು ಹೆಂಗೆ? ನಾನವತ್ತು ಊರ್ನಲ್ಲಿ ಇರ್ಲಿಲ್ಲ. ನಿಂಗೇನಾದ್ರೂ ಗೊತ್ತಾ?

ತಿಮ್ಮ : ನಾನೇ ಕಣ್ಣಾರ ಕಂಡೆ ಕನಣ್ಣ. ಅಬ್ಬಬ್ಬಾ! ಆ ನನ್ ತಾಯಿ ಸಾಕ್ಷಾತ್ ದೇವತೆಯೇ ಕನಪ್ಪ. ಅವಳ ಕೆಚ್ಚು ಬೇರೆಯವರ್ಗೆ ಹೆಂಗೆ ಬಂದೀತು!

ಕರಿಯ : (ಕುತೂಹಲದಿಂದ)
ಹೆಂಗಾಯ್ತು ಸ್ವಲ್ಪ ಬಿಡ್ಸಿ ಹೇಳ್ತೀಯ.

ತಿಮ್ಮ : ಆವತ್ತು ಹೊತ್ತಿಗೆ ಮುಂಚೇನೆ ಇಲ್ಲೆಲ್ಲಾ ಸುತ್ತಾ ಬೇಕಾದಷ್ಟು ಜನ ಸೇರ್ಬುಟ್ಟಿತ್ತು. ನೋಡು, ಅಲ್ಲಿ ಕಾಣಿಸ್ತಾದಲ್ಲ ಮೆಟ್ಲುಗಲ್ಲು, ಅಲ್ಲೇ ಜೋಯಿಸಪ್ಪ, ಗೌಡ, ಗೌಡ್ನ ಮನೆಯವ್ರು ಎಲ್ಲಾ ನಿಂತಿದ್ರು. ನಾನು ಅವರ ಪಕ್ಕದಲ್ಲೇ ನಿಂತಿದ್ದೆ. ಜೋಯ್ಸಪ್ಪ ಅದೇನೇನೊ "ಮಣಮಣ'' ಅಂತ ಮಂತ್ರನಾ ಬಾಯಲ್ಲಿ ಹೇಳ್ಕೊಂಡು ಎಲ್ಲಾ ದಿಕ್ಕಿಗೂ ಪೂಜೆ ಮಾಡ್ದ. ಆಮೇಲೆ ಆರತಿ ತಟ್ಟೇನಾ ಭಾಗೀರತವ್ವನ ಕೈಯಾಗೆ ಇಟ್ಟು "ನೋಡಮ್ಮ, ಈ ತಟ್ಟೇನ ಹಿಡ್ಕೊಂಡು ಬಾವಿ ಒಳಕ್ಕೆ ಹುಷಾರಾಗಿ ಇಳಿದ್ಹೋಗು. ಅಲ್ಲಿ ಕೆಳ್ಗಡೆ ಇರೋ ಕಲ್ಲಿಗೆ ಕುಂಕುಮ ಹಚ್ಚಿ, ಹೂ ಮುಡ್ಸಿ, ಗಂಗಮ್ಮನ ಹೆಸರ್ನಲ್ಲಿ ಮಂಗಳಾರತಿ ಎತ್ತಿ ಪೂಜೆ ಮಾಡಿ, ಕೈ ಮುಕ್ಕೊಂಡು ಬಾ. ಆದರೆ ಬರುವಾಗ ಮಾತ್ರ ಹಿಂತಿರುಗಿ ನೋಡ್ಬೇಡ'' ಅಂದ.

ಕರಿಯ : ಹೆಂಗಪ್ಪ ಬಾವಿ ಒಳಾಕೆ ಇಳಿದ್ಹೋದಳು !

ತಿಮ್ಮ : ನೋಡು ಅಲ್ಲೇ ಕಾಣಲ್ವ. ಮೆಟ್ಲು ತರಾ ಕಡೆದೀರು ಹಂತಗಳು.

ಕರಿಯ : ಅಬ್ಬಬ್ಬಾ! ಇಷ್ಟಾಳುದ್ದ ಬಾವಿ ಒಳಾಕೆ ಒಬ್ಳೇಳೆ ಇಳಿದ್ಹೋದಳು ಅಂದ್ರೆ, ಆ ಮೊಗ ಮೊದ್ಲೇ ನಿಶ್ಚಯಿಸಿಕೊಂಡಿದ್ಲು ಅಂತ ಕಾಣ್ತದೆ. ಆಮೇಲೆ ಮುಂದಕೆ ಏನಾಯ್ತು?

ತಿಮ್ಮ : ನಾವೆಲ್ಲಾ ಬಗ್ಗಿಕೊಂಡು ನೋಡ್ತಲೇ ಇದ್ದೊ. ಅಲ್ಲಿದ್ದ ಜನವೆಲ್ಲಾ ಕಯ್ಕಿಕ್ ಪಿಯ್ಕಿಕ್ ಅನ್ದೆ ನಿಂತಿದ್ರು. ಭಾಗೀರತವ್ವ ಒಳಾಕೆ ಹೋದ್ಲು, ಪೂಜೆ ಮಾಡುದ್ಲು. ಆಮೇಲೆ ಮೇಲಕ್ಕೆ ಹತ್ತಿ ಬತ್ತಾ ಇದ್ಲು... ಅಷ್ಟರಲ್ಲಿ...

ಕರಿಯ : (ಉದ್ವೇಗ ತಡೆಯಲಾರದೆ)
ಏನಾಯ್ತಪ್ಪ?

ತಿಮ್ಮ : ಅರ್ಧಕ್ಕಿಂತ ಮೇಲಕ್ಕೆ ಬಂದಿದ್ಲು. ಅಲ್ನೋಡು ಮೆಟ್ಲು ಭೋ ಕಡಿದಾಗೈತಲ್ಲ, ಅಲ್ಲಿ ಅದ್ಯಾವ ರೀತಿ ಕಾಲಿಟ್ಟಳೋ ಏನೋ? ಆಗ ಜಾರಿ ಬುಡ್ತೋ.... ಎಡಗು ಬುಡ್ತೋ.... ಗೊತ್ತಿಲ್ಲ ಕನಣ್ಣ, ಹಂಗೆಯೇ ಅನಾಮತ್ ಹಿಂದುಮೊಕನಾಗಿ 'ದೊಪ್' ಅಂತ ಬಿದ್ದೋಗ್ಬುಟ್ಳು.

ಕರಿಯ : ಅಯ್ಯಯ್ಯೋ! ಹಂಗಾರೆ ಅವಳ ತಲೇನೆ ಒಡೆದ್ಹೋಗಿರ್ಬೇಕು.

ತಿಮ್ಮ : ನೋಡ್ತಿದ್ದಂಗೆ ನನ್ ಕಣ್ಗೆ ಕತ್ತಲು ಕಟ್ಟಿದಂಗೆ ಆಯ್ತು. ಅಲ್ಲೆ ಒಂದಷ್ಟೊತ್ತು ಕುಸಿದೋದೆ.

ಕರಿಯ : ಆಗ ಮಲ್ಲನಗೌಡ ಏನ್ಮಾಡ್ತಿದ್ದ ?

ತಿಮ್ಮ : ಅಯ್ಯೋ, ಅವನ ಸಂಕ್ಟಾನ ಯಾರ್ತಾನೆ ಹೇಳೋಕಾದೀತಪ್ಪ. ಗೌಡನ್ನ, ಗೌಡ್ತೀನಾ ಹತ್ತಾರ್ ಜನ ಹಿಡ್ಕೊಂಡು ಸಮಾಧಾನ ಮಾಡ್ತಿದ್ರು. “ನಮ್ಮ ಭಾಗೀರಥಿ ಹೋದ್ಕಡೆಗೆ ನಮ್ನು ಬುಟ್ಬುಡೀ'' ಅಂತ ಅರಚ್ಕೊಂಡು ಅರಚ್ಕೊಂಡು ಬಾವೀದಿಕ್ಕ ಅವರಿಬ್ಬರು ನುಗ್ಗುತ್ತಿದ್ರು.

ಕರಿಯ : ಅಯ್ಯೋ ದೇವರೆ ! ಎಂತಾ ಕಷ್ಟ ಕೊಟ್ಟಪ್ಪ.
(ಅರೆಗಳಿಗೆ ಸುಮ್ಮನಿದ್ದು)
ಮಾದೇವಪ್ಪ ಯಾವಾಗ ಬಿದ್ದು ಸತ್ತ.

ತಿಮ್ಮ : ಅದ್ನಂತೂ ಕಂಡೋರು ಇಲ್ಲ; ಕೇಳ್ದೋರು ಇಲ್ಲ. ಭಾಗೀರತವ್ವ ಸತ್ತ ಎರಡು ದಿನದ ಮೇಲೆ, ಬಾವಿ ತೋಡೂರು ಇಲ್ಲಿಗೆ ಬಂದಾಗ, ಅವರ ಕಣ್ಗೆ ಮಾದೇವಪ್ಪನ ಹೆಣ ಬಾವಿ ಒಳಗೆ ಬಿದ್ದಿರೋದು ಕಾಣ್ತಂತೆ!

(ಇಬ್ಬರೂ ಒಂದು ಬಗೆಯ ಸಂಕಟದಿಂದ ನೋಯುತ್ತ ಬಾವಿಯತ್ತ ನೋಡತೊಡಗುತ್ತಾರೆ.)

❍

ಬರಹಗಾರ

ಹೆಸರು	:	ಸಿ.ಪಿ. ನಾಗರಾಜ
ತಾಯಿ	:	ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.
ತಂದೆ	:	ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
ಓದು	:	ಎಂ.ಎ., ಪಿಎಚ್.ಡಿ.
ಕೆಲಸ	:	ಕನ್ನಡ ಉಪನ್ಯಾಸಕ 1971-72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ. 1972-2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 2006-ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.
ನಾಟಕ	:	ಭಾಗೀರಥಿ, ಅಂಬೆ, ಹಾವು, ಅಂಗಿ ಬಟ್ಟೆ, ಒಂದು ರೂಪಾಯಿ, ಕಳ್ಳರಿದ್ದಾರೆ... ಎಚ್ಚರಿಕೆ, ಹೆಣದ ಹಣ
ಗದ್ಯ	:	ಹಳ್ಳಿಗಾಡಿನ ರೂವಾರಿ, ಡಾ.ಬಂದೀಗೌಡ, ಆಣೆ ಪ್ರಮಾಣಗಳು, ಬಯ್ಗುಳ, ಸರ್ವಜ್ಞ ವಚನಗಳ ಓದು, ಅಲ್ಲಮ ವಚನಗಳ ಓದು, ಶಿವಶರಣಶರಣೆಯರ ವಚನಗಳ ಓದು, ಶಿವಶರಣರ ವಚನಗಳ ಓದು, ಬಸವಣ್ಣ ವಚನಗಳ ಓದು, ಮುದ್ದೆಗಂಟು
ವಿಳಾಸ	:	ಸಿ.ಪಿ. ನಾಗರಾಜ, 75, 'ಎ' ಬ್ಲಾಕ್, 5 ನೆಯ ಕ್ರಾಸ್, ಕೃಷ್ಣ ಗಾರ್ಡನ್, ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521. ngy7777@gmail.com